# ಹರಿಹರದ ದಸರಾ ಉತ್ಸವ ಆಕರ್ಷಣೆಯ ಕೇಂದ್ರ



ಹರಿಹರದಲ್ಲಿ ನಡೆದ ಸಭೆಯನ್ನು ಶಾಸಕ ಬಿ.ಪಿ.ಹರೀಶ್ ಉದ್ಘಾಟಿಸಿದರು.

**ಹರಿಹರ:** 'ನಗರದಲ್ಲಿ ಪ್ರತಿ ವರ್ಷ ಶ್ರದ್ಧೆಯಿಂದ ಆಚರಿಸುವ ದಸರಾ ಮಹೋತ್ಸವವು ತಾಲ್ಲೂಕಿನ ಪ್ರಮುಖ ಆಕರ್ಷಣೀಯ ಕಾರ್ಯಕ್ರಮಗಳಲ್ಲಿ ಒಂದಾಗಿದೆ' ಎಂದು ಶಾಸಕ ಬಿ.ಪಿ.ಹರೀಶ್ ಹೇಳಿದರು.

ನಗರದ ಕೋಟೆಯ ಓಂಕಾರ ಮಠದ ಸಭಾಂಗಣದಲ್ಲಿ ದಸರಾ ಮಹೋತ್ಸವ ಸಮಿತಿಯಿಂದ ಆಯೋಜಿಸಿದ್ದ ಪೂರ್ವಭಾವಿ ಸಭೆ ಉದ್ಘಾಟಿಸಿ ಮಾತನಾಡಿದರು.

'21 ವರ್ಷಗಳಿಂದ ನಡೆಯುತ್ತಿರುವ ದಸರಾ ಅಂಬಾರಿ ಹಾಗೂ ಶೋಭಾಯಾತ್ರೆ ವೀಕ್ಷಣೆಗೆ ಸುತ್ತಲಿನ ಗ್ರಾಮಸ್ಥರು ಸೇರುತ್ತಾರೆ. ಮೈಸೂರಿಗೆ ಹೋಗಲಾಗದವರು ಇಲ್ಲಿ ವೀಕ್ಷಿಸಿ ಸಂತಸ ಪಡುತ್ತಾರೆ' ಎಂದರು.

'ಸರ್ಕಾರದಿಂದ ಅನುದಾನ ಸಿಕ್ಕಲ್ಲಿ ಇನ್ನಷ್ಟು ಅರ್ಥಪೂರ್ಣವಾಗಿ ದಸರಾ ಆಚರಿಸಲು ಸಾಧ್ಯ' ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಎಸ್.ಎಂ.ವೀರೇಶ್ ಹನಗವಾಡಿ ಅಭಿಪ್ರಾಯ ಪಟ್ಟರು. ಸೆ.22 ರಿಂದ ಅ.2ರವರೆಗೆ ಶರನ್ನವರಾತ್ರಿ ಉತ್ಸವ ನಡೆಯಲಿದ್ದು, ಅ.2ರಂದು ಸಾಮೂಹಿಕ ಬನ್ನಿ ಹಾಗೂ ಅದ್ದೂರಿ ಅಂಬಾರಿ ಮೆರವಣಿಗೆ ಜರುಗಲಿದೆ. ನಗರದ ಎಲ್ಲರೂ ಪಾಲ್ಗೊಳ್ಳಬೇಕು' ಎಂದು ಸಮಿತಿಯ ಅಧ್ಯಕ್ಷ ಶಂಕರ್ ಖಟಾವ್‌ಕರ್ ಕೋರಿದರು.

ಪುರೋಹಿತ ನಾರಾಯಣ ಜೋಯಿಸ್, ಶಿವಪ್ರಕಾಶ್ ಶಾಸ್ತ್ರಿ ಮಾತನಾಡಿದರು. ಖಜಾಂಚಿ ಅಜಿತ್ ಸಾವಂತ್ ಲೆಕ್ಕಪತ್ರ ಮಂಡಿಸಿದರು. ಚಂದ್ರಶೇಖರ್ ಪೂಜಾರ್, ಪೌರಾಯುಕ್ತ ಎಂ.ಪಿ.ನಾಗಣ್ಣ, ಇನ್‌ಸ್ಪೆಕ್ಟರ್ ಆರ್.ಎಫ್. ದೇಸಾಯಿ, ಹಿಂಡಸಘಟ್ಟ ಲಿಂಗರಾಜ್, ಡಿ.ಜಿ.ಶಿವಾನಂದಪ್ಪ, ಐರಣಿ ಬಾಬಣ್ಣ, ಅಮರಾವತಿ ಮಹದೇವಪ್ಪ ಗೌಡ, ನಾಗಮಣಿ ಶಾಸ್ತ್ರಿ, ಟಿ.ಜೆ.ಮುರುಗೇಶಪ್ಪ, ಅಮರಾವತಿ ರೇವಣಸಿದ್ದಪ್ಪ, ಅಂಬಾಸಾ ಹಂಸಾಗರ, ಮಾಲತೇಶ್ ಜಿ.ಭಂಡಾರಿ, ಪರಶುರಾಮ ಕಾಟ್ವೆ, ಪ್ರಕಾಶ್ ಶೆಟ್ಟಿ, ಸಾಕ್ಷಿ ಶಿಂಧೆ, ಅಂಬುಜಾ ರಾಜೋಳಿ ಹಾಗೂ ವಿವಿಧ ಸಮಾಜಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ರಾಹುಲ್ ಗಾಂಧಿ ಮನವೊಲಿಕೆಗೆ ಚಿಂತನೆ

**ಮೂರು ದಶಕದ ನಿರಂತರ ಹೋರಾಟದ ನಂತರ ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ಜಾರಿ ಮಾಡಿದ್ದು ಸ್ವಾಗತಾರ್ಹ. ಆದರೆ, ಅಲೆಮಾರಿಗಳಿಗೆ ಪ್ರತ್ಯೇಕ ಮೀಸಲು ಕೊಟ್ಟಿದ್ದರೆ ಎಲ್ಲರಿಗೂ ಸಮಾಧಾನವಾಗೋದು. ಸರ್ಕಾರದ ಸೌಲಭ್ಯದಿಂದ ವಂಚಿತ ಅಲೆಮಾರಿಗಳಿಗೆ ಪ್ರತ್ಯೇಕ ಮೀಸಲು ಸಿಗದೇ ಇದ್ದರೆ ಈಗಿನ ಪ್ರಯತ್ನಕ್ಕೆ ಗೌರವ ಬರುವುದಿಲ್ಲ. ಪಕ್ಷಾತೀತವಾಗಿ ಹೋರಾಟ ರೂಪಿಸಿ ಅವರಿಗೂ ನ್ಯಾಯ ಕಲ್ಪಿಸೋಣ' ಎಂದು ಸಭೆಯಲ್ಲಿ ಹಲವರು ಸಲಹೆ ನೀಡಿದರು.**



ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಜಾರಿ ಹೋರಾಟ ಸಮಿತಿ ಶಾಸಕರ ಭವನದಲ್ಲಿ ಆಯೋಜಿಸಿದ್ದ 'ಸಮಾಲೋಚನಾ ಸಭೆ'ಯಲ್ಲಿ ರಾಜಪ್ಪ ದಳವಾಯಿ ಮಾತನಾಡಿದರು.

**ಬೆಂಗಳೂರು:** 'ಅಲೆಮಾರಿ ಸಮುದಾಯಗಳಿಗೆ ಶೇಕಡ 1ರಷ್ಟು ಪ್ರತ್ಯೇಕ ಮೀಸಲು ಕೊಡಿಸಲು ಖುದ್ದು ರಾಹುಲ್‌ಗಾಂಧಿ ಅವರನ್ನು ಭೇಟಿ ಮಾಡಿ ಮನವರಿಕೆ ಮಾಡಿಕೊಡೋಣ. ಅಗತ್ಯ ಬಿದ್ದರೆ ಕಾನೂನು ಹೋರಾಟದ ಕುರಿತು ಪರಿಶೀಲನೆ ಮಾಡೋಣ' ಎನ್ನುವ ಅಭಿಪ್ರಾಯ ವ್ಯಕ್ತವಾಯಿತು.

ಶಾಸಕರ ಭವನದಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಜಾರಿ ಹೋರಾಟ ಸಮಿತಿ ಆಯೋಜಿಸಿದ್ದ ಸಭೆಯಲ್ಲಿ ವಿವಿಧ ಸಮುದಾಯಗಳ ಪ್ರಮುಖರು, ಸಾಹಿತಿಗಳು, ಹೋರಾಟಗಾರರು ಚರ್ಚಿಸಿದರು.

ನಾಗಮೋಹನ ದಾಸ್ ಆಯೋಗದ ವರದಿ ಅನುಸಾರ ಅಸ್ಪೃಶ್ಯ ಅಲೆಮಾರಿ ಗಳಿಗೆ ಶೇ 1ರಷ್ಟು ಪ್ರತ್ಯೇಕ ಮೀಸಲು ನೀಡಬೇಕು. ತೆಲಂಗಾಣ ಮಾದರಿ ಮೀಸಲು ಬಿಂದು ಅನುಸರಿಸಬೇಕು. ಅಲೆಮಾರಿ ಅಭಿವೃದ್ಧಿ ನಿಗಮದಲ್ಲಿ 49 ಅತಿಸೂಕ್ಷ್ಮ ಸಮುದಾಯಗಳಿಗೆ ಮಾತ್ರ ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸುವ ನಿರ್ಣಯ ಕೈಗೊಳ್ಳಲಾಯಿತು.

ಮೀಸಲು ಪ್ರಮಾಣವನ್ನು ಶೇ 5.5ರಂತೆ ಎರಡೂ ಕಡೆಯವರಿಗೆ ನೀಡಿ, ಉಳಿಕೆ ಶೇ 1ರಷ್ಟನ್ನು ಅಲೆಮಾರಿ ಗಳಿಗೆ, ಇನ್ನೂ ಶೇ 1ರಷ್ಟನ್ನು ಉಳಿದ 29 ಜಾತಿಗಳಿಗೆ ಹಂಚುವ ಸೂತ್ರ ವನ್ನು ರೂಪಿಸುವುದು ಒಳ್ಳೆಯದು ಎನ್ನುವ ಸಲಹೆಗೂ ಸಹಮತ ವ್ಯಕ್ತವಾಯಿತು.

ಮೂರು ದಶಕದ ನಿರಂತರ ಹೋರಾಟದ ನಂತರ ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ಜಾರಿ ಮಾಡಿದ್ದು ಸ್ವಾಗತಾರ್ಹ. ಆದರೆ, ಅಲೆಮಾರಿಗಳಿಗೆ ಪ್ರತ್ಯೇಕ ಮೀಸಲು ಕೊಟ್ಟಿದ್ದರೆ ಎಲ್ಲರಿಗೂ ಸಮಾಧಾನವಾಗೋದು. ಸರ್ಕಾರದ ಸೌಲಭ್ಯದಿಂದ ವಂಚಿತ ಅಲೆಮಾರಿಗಳಿಗೆ ಪ್ರತ್ಯೇಕ ಮೀಸಲು ಸಿಗದೇ ಇದ್ದರೆ ಈಗಿನ ಪ್ರಯತ್ನಕ್ಕೆ ಗೌರವ ಬರುವುದಿಲ್ಲ. ಪಕ್ಷಾತೀತವಾಗಿ ಹೋರಾಟ ರೂಪಿಸಿ ಅವರಿಗೂ ನ್ಯಾಯ ಕಲ್ಪಿಸೋಣ' ಎಂದು ಸಭೆಯಲ್ಲಿ ಹಲವರು ಸಲಹೆ ನೀಡಿದರು.

'ಸದ್ಯವೇ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮತ್ತೊಮ್ಮೆ ಮನವಿ ಮಾಡೋಣ. ರಾಹುಲ್ ಗಾಂಧಿ ಅವರಿಗೂ ಪರಿಸ್ಥಿತಿ ಮನವರಿಕೆ ಮಾಡಿ ಕೊಡೋಣ. ಕಾನೂನು ಹೋರಾಟ ವನ್ನೂ ಮಾಡೋಣ. ಜನಾಭಿಪ್ರಾಯ ರೂಪಿಸುತ್ತಲೇ ಸರ್ಕಾರದ ಮೇಲೆ ಒತ್ತಡ ಹೇರುವ ಪ್ರಯತ್ನ ನಿಲ್ಲಿಸದಿರೋಣ' ಎಂದು ಕೆಲವರು ಅಭಿಪ್ರಾಯ ಸೂಚಿಸಿದರು. ಒಳ ಮೀಸಲು ಹೋರಾಟಗಾರ ಎಸ್.ಮಾರೆಪ್ಪ, ವಡ್ಡಗೆರೆ ನಾಗರಾಜಯ್ಯ, ಬಸವರಾಜ್ ಕೌತಾಳ್, ಎ.ಎಸ್.ಪ್ರಭಾಕರ್, ನಿರಂಜನಾರಾಧ್ಯ, ರಹಮತ್ ತರೀಕೆರೆ, ಹುಲಿಕುಂಟೆ ಮೂರ್ತಿ, ಕುರುವ ಬಸವರಾಜ್, ಮೈತ್ರೇಯಿ, ಕೆ.ಷರೀಫಾ, ಶ್ರೀಪಾದಭಟ್, ಲೋಕೇಶ್ ಸಹಿತ ಹಲವರು ಇದ್ದರು.

## ವಿಜ್ಞಾನ, ತಂತ್ರಜ್ಞಾನಗಳ ವಸ್ತು ಪ್ರದರ್ಶನ–ಅನ್ವೇಷಣೋತ್ಸವಕ್ಕೆ ಚಾಲನೆ

# ಸದಾ ಚಲನೆಯ ಅನ್ವೇಷಣೆಯೇ ವಿಜ್ಞಾನ



ಶಿವಮೊಗ್ಗದ ಕೃಷಿ ಮಹಾವಿದ್ಯಾಲಯದಲ್ಲಿ ಆರಂಭವಾದ ಕಾರ್ಯಕ್ರಮವನ್ನು ಕುಲಪತಿ ಪ್ರೊ.ಆರ್.ಸಿ.ಜಗದೀಶ್ ಉದ್ಘಾಟಿಸಿದರು.

### 18 ಮಾದರಿಗಳ ಪ್ರದರ್ಶನ ವಿಶೇಷ:

**ಕಾರ್ಯಕ್ರಮದಲ್ಲಿ ಇಸ್ರೊ ಉಪಗ್ರಹ, ಬಾಹ್ಯಾಕಾಶ ನೌಕೆಗಳ ಮಾದರಿ, ಬಾಹ್ಯಾಕಾಶ ಸಂಶೋಧನೆಗೆ ಸಂಬಂಧಿಸಿದ ಪೋಸ್ಟರ್, ಮಾಹಿತಿ ಫಲಕ, ಆಡಿಯೊ–ವಿಷುವಲ್ ಸೇರಿದಂತೆ 18 ಮಾದರಿಗಳ ಪ್ರದರ್ಶನ ಕಾಣಬಹುದು. ಬೆಂಗಳೂರು ವಿಜ್ಞಾನ ಮತ್ತು ತಂತ್ರಜ್ಞಾನ ಸಂಗ್ರಹಾಲಯ ನಡೆಸುವ 'ಸೈನ್ಸ್ ಆನ್ ವೀಲ್ಸ್' ಪ್ರದರ್ಶನದಲ್ಲಿ ಸಾರ್ವಜನಿಕರು, ವಿದ್ಯಾರ್ಥಿಗಳು ಮೊಬೈಲ್ ವಾಹನದೊಳಗೆ ಫಲಕಗಳನ್ನು ಓದಿಕೊಂಡು ಸ್ವತಃ ತಾವೇ ಉತ್ಸಾಹದಿಂದ ಪ್ರಯೋಗ ಮಾಡಿ ಖುಷಿಪಟ್ಟರು.**

**ಶಿವಮೊಗ್ಗ:** 'ವಿಜ್ಞಾನ ನಿಂತ ನೀರಲ್ಲ. ಸದಾ ಚಲನೆಯಲ್ಲಿರುವ ಅನ್ವೇಷಣೆ. ಅದರ ಮಹತ್ವವನ್ನು ಗ್ರಹಿಸಿ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು' ಎಂದು ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್‌ನ ಅಧ್ಯಕ್ಷ ಹುಲಿಕಲ್ ನಟರಾಜ್ ಹೇಳಿದರು.

ನವುಲೆಯ ಕೃಷಿ ಮಹಾವಿದ್ಯಾಲಯದಲ್ಲಿ ವಿಜ್ಞಾನ ತಂತ್ರಜ್ಞಾನ ಸಂಶೋಧನೆ ಮತ್ತು ಕಲಾ ಪ್ರಗತಿ ಸಂಸ್ಥೆ, ರಾಜ್ಯ ವೈಜ್ಞಾನಿಕ ಪರಿಷತ್ ವತಿಯಿಂದ ಆರಂಭವಾದ ಐದು ದಿನಗಳ ವಿಜ್ಞಾನ ಮತ್ತು ತಂತ್ರಜ್ಞಾನಗಳ ವಸ್ತು ಪ್ರದರ್ಶನ 'ಅನ್ವೇಷಣೋತ್ಸವ 2025' ಉದ್ಘಾಟಿಸಿ ಮಾತನಾಡಿದರು. ಭಯ, ಆತಂಕ, ದುಗುಡ, ದುರಾಸೆಯಿಂದ ವಿಜ್ಞಾನ ದೂರವಾಗುತ್ತದೆ. ಆದರೆ ನಾವು ಅವನ್ನೆಲ್ಲ ಮೀರಿ ವೈಜ್ಞಾನಿಕ ಮನೋಭಾವ ಬೆಳೆಸಿಕೊಂಡು ಅಭಿವೃದ್ಧಿಯೆಡೆಗೆ ಹೆಜ್ಜೆ ಹಾಕಬೇಕು. ವಿಜ್ಞಾನಕ್ಕೆ ಸಂಬಂಧಿಸಿದಂತೆ ಸದಾ ಕುತೂಹಲಿಗ ಳಾಗಿದ್ದು, ಪ್ರತಿ ವಿಷಯಗಳ ಬಗ್ಗೆ ಮಾಹಿತಿ ಪಡೆದು, ವಿಚಾರಿಸಿ ಅದರಲ್ಲಿ ತೊಡಗಿಕೊಳ್ಳಬೇಕು' ಎಂದರು. ಅನ್ವೇಷಣೋತ್ಸವದಲ್ಲಿ ದೇಶ ದ ಎಂಟು ಪ್ರತಿಷ್ಠಿತ ಸಂಸ್ಥೆಗಳು ಪಾಲ್ಗೊಂಡಿವೆ. ಡಿಆರ್‌ಡಿಒ, ಇಸ್ರೊ, ಪ್ಲಾಸ್ಮಾ ಸಂಶೋಧನಾ ಸಂಸ್ಥೆಗಳಿಗೆ ಸಾಮಾನ್ಯರಿಗೆ ಪ್ರವೇಶ ಕಷ್ಟ. ಆದರೆ ಈ ಸಂಸ್ಥೆಗಳು ಈಗ ನಿಮ್ಮ ಮನೆ ಬಾಗಿಲಿಗೆ ಬಂದಿವೆ. ವಿದ್ಯಾರ್ಥಿಗಳು, ಸಾರ್ವಜನಿಕರು ಸದುಪಯೋಗ ಪಡೆಯಬೇಕು' ಎಂದು ಹೇಳಿದರು.

ಎಸ್‌ಎಎಸ್‌ಟಿಆರ್‌ಎ ಅಧ್ಯಕ್ಷ ಡಾ.ಓಂಕಾರ ನಾಯ್ಕ ಪ್ರಾಸ್ತಾವಿಕವಾಗಿ ಮಾತನಾಡಿದರು.

'ಗ್ರಾಮೀಣ ವಿದ್ಯಾರ್ಥಿಗಳಿಗೆ ವಿಜ್ಞಾನ ತಲುಪಿಸಲು ಹಾಗೂ ಯುವ ಮನಸ್ಸುಗಳಲ್ಲಿ ವಿಜ್ಞಾನ–ತಂತ್ರಜ್ಞಾನದ ಬಗ್ಗೆ ಕುತೂಹಲ ಮೂಡಿಸಲು, ರಕ್ಷಣಾ ಕ್ಷೇತ್ರದಲ್ಲಿ ದೇಶ ಸಾಧಿಸಿರುವ ತಾಂತ್ರಿಕ ಶಕ್ತಿ ಮತ್ತು ಸ್ವಾವಲಂಬನೆ ಪರಿಚಯಿಸುವುದು ಈ ಕಾರ್ಯಕ್ರಮದ ಉದ್ದೇಶ' ಎಂದರು.

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಆರ್.ಸಿ.ಜಗದೀಶ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿ.ವಿ ಆಡಳಿತ ಮಂಡಳಿ ಸದಸ್ಯರಾದ ಕೆ.ಪಿ.ಬಸವರಾಜ್, ಕುಮಾರಸ್ವಾಮಿ, ದೇವಿಕುಮಾರ್, ಶಶಾಂಕ್, ಡಿಡಿಪಿಯು ಚಂದ್ರಪ್ಪ ಗುಂಡಪಲ್ಲಿ ಹಾಜರಿದ್ದರು.

ಕಾರ್ಯಕ್ರಮದಲ್ಲಿ ಇಸ್ರೊ ಉಪಗ್ರಹ, ಬಾಹ್ಯಾಕಾಶ ನೌಕೆಗಳ ಮಾದರಿ, ಬಾಹ್ಯಾಕಾಶ ಸಂಶೋಧನೆಗೆ ಸಂಬಂಧಿಸಿದ ಪೋಸ್ಟರ್, ಮಾಹಿತಿ ಫಲಕ, ಆಡಿಯೊ–ವಿಷುವಲ್ ಸೇರಿದಂತೆ 18 ಮಾದರಿಗಳ ಪ್ರದರ್ಶನ ಕಾಣಬಹುದು. ಬೆಂಗಳೂರು ವಿಜ್ಞಾನ ಮತ್ತು ತಂತ್ರಜ್ಞಾನ ಸಂಗ್ರಹಾಲಯ ನಡೆಸುವ 'ಸೈನ್ಸ್ ಆನ್ ವೀಲ್ಸ್' ಪ್ರದರ್ಶನದಲ್ಲಿ ಸಾರ್ವಜನಿಕರು, ವಿದ್ಯಾರ್ಥಿಗಳು ಮೊಬೈಲ್ ವಾಹನದೊಳಗೆ ಫಲಕಗಳನ್ನು ಓದಿಕೊಂಡು ಸ್ವತಃ ತಾವೇ ಉತ್ಸಾಹದಿಂದ ಪ್ರಯೋಗ ಮಾಡಿ ಖುಷಿಪಟ್ಟರು. ಫ್ಯೂಷನ್ ವಿಜ್ಞಾನ, ಪ್ಲಾಸ್ಮಾದ ಜೀವಂತ ಪ್ರದರ್ಶನ ಮಾಹಿತಿ ಪೂರ್ಣವಾಗಿದ್ದು, ಆರ್ಯಭಟ ಪ್ಲಾನಿಟೋರಿಯಂನಲ್ಲಿ ಡೋಮ್ ವಿಷುವಲ್ಸ್ ಮೂಲಕ ಕಾಸ್ಮಿಕ್ ಜಗತ್ತಿನ ಪರಿಚಯ ಮಾಡಿಸುವುದು ವಿಶೇಷ ಅನುಭವ ನೀಡುತ್ತದೆ.

## ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮನೋವಿಜ್ಞಾನಿ ಸಿ.ಆರ್.ಚಂದ್ರಶೇಖರ್

# ಹುಸಿ ನಂಬಿಕೆಗಳಿಂದ ದೂರ ಇರುವುದು ಒಳಿತು

**ಶಿವಮೊಗ್ಗ:** 'ಮೂಢ ನಂಬಿಕೆಗಳಿಂದಾಗಿ ತಪ್ಪು ದಾರಿಯಲ್ಲಿ ಹೋಗುತ್ತಿದ್ದೇವೆ. ಆದ್ದರಿಂದ, ಹುಸಿ ನಂಬಿಕೆಗಳಿಂದ ದೂರ ಇರಬೇಕು. ವಿಜ್ಞಾನ ಯಾವುದನ್ನೂ ಸಂಕುಚಿತವಾಗಿ ನಂಬುವುದಿಲ್ಲ' ಎಂದು ಹಿರಿಯ ಮನೋವಿಜ್ಞಾನಿ ಸಿ.ಆರ್.ಚಂದ್ರಶೇಖರ್ ಹೇಳಿದರು.

ಇಲ್ಲಿನ ಬಿ.ಎಚ್.ರಸ್ತೆಯ ಕರ್ನಾಟಕ ಸಂಘದಲ್ಲಿ ಆಯೋಜಿಸಿದ್ದ 'ಜೀವಮಾನ ಸಾಧನೆ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಡಾ.ಶಿವರಾಮ ಕಾರಂತ ವಿಜ್ಞಾನ ಸಾಹಿತ್ಯ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

'ನಮ್ಮ ನಡುವೆ ನೂರೆಂಟು ಮೂಢನಂಬಿಕೆಗಳು ಇವೆ. ಹುಸಿ ನಂಬಿಕೆಗಳ ಭಾರ ಹೊತ್ತು ನಡೆಯಬಾರದು. ಅಂತೆ? ಕಂತೆಗಳನ್ನು ನಂಬಿ ಬದುಕುವುದನ್ನು ನಿಲ್ಲಿಸಬೇಕು. ಕಾರಂತರ ಹೆಸರಲ್ಲಿ ಪ್ರಶಸ್ತಿ ಸ್ವೀಕರಿಸಿದ್ದಕ್ಕೆ ಸಂಘಕ್ಕೆ ಋಣಿಯಾಗಿದ್ದೇನೆ. ಇದೊಂದು ಅಪೂರ್ವ ವೇದಿಕೆ' ಎಂದರು.

ಹಿರಿಯ ಸಂಶೋಧಕಿ ಟಿ.ಎನ್.ನಾಗರತ್ನ, ಶಂಬಾ ಜೋಶಿ ಸಂಶೋಧನಾ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು. 'ಈ ಪ್ರಶಸ್ತಿ ಪಡೆಯುತ್ತಿರುವುದು ಹೆಮ್ಮೆಯ ಸಂಗತಿ. ಇದು ನನ್ನ ತವರು ಮನೆಯಿಂದ ನೀಡುತ್ತಿರುವ ಬಾಗಿನ ಎನ್ನುವಂತೆ ಭಾಸವಾಗುತ್ತಿದೆ.

ನನ್ನ ಊರೇ ನನ್ನನ್ನು ಗುರುತಿಸಿಲ್ಲ ಎನ್ನುವ ಅಳುಕಿತ್ತು. ಈಗದು ದೂರ ಸರಿಯಿತು. ಶಿವಮೊಗ್ಗ ನನ್ನ ತವರೂರು. ಒಂದನೇ ತರಗತಿಯಿಂದ ಬಿ.ಎ ಪದವಿವರೆಗೂ ಇಲ್ಲಿಯೇ ಓದಿರುವುದು' ಎಂದರು.

'ಮಾವಿನ ಮರ ಹತ್ತಿದ್ದು, ತುಂಗೆಯಲ್ಲಿ ಈಜಿದ್ದು, ಇದೆಲ್ಲವನ್ನೂ ಹೇಗೆ ಮರೆಯಲು ಸಾಧ್ಯ. ತವರು ನೆಲದಲ್ಲಿ ಎಲ್ಲವನ್ನು ಅನುಭವಿಸಿದ್ದೇನೆ. ನಾನು ನಾನಾಗಿ ಬೆಳೆಯಲು ಅವಕಾಶ ಮಾಡಿಕೊಟ್ಟ ಊರು ಶಿವಮೊಗ್ಗ. ಕರ್ನಾಟಕ ಸಂಘಕ್ಕೂ ನನಗೂ 60 ವರ್ಷದ ನಂಟಿದೆ' ಎಂದು ತಿಳಿಸಿದರು.

ಸಂಶೋಧಕ ಪ್ರೊ.ಎನ್.ಎಂ.ತಳವಾರ್ ಹಾಗೂ ವೈದ್ಯೆ ಕೆ.ಎಸ್.ಪವಿತ್ರ ಅವರು ಪ್ರಶಸ್ತಿ ಪುರಸ್ಕೃತರ ಕುರಿತ ಅಭಿನಂದನಾ ನುಡಿಗಳನ್ನಾಡಿದರು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಎಚ್.ಆರ್.ಶಂಕರ ನಾರಾಯಣ ಶಾಸ್ತ್ರಿ, ಸಂಘದ ಕಾರ್ಯದರ್ಶಿ ವಿನಯ್ ಶಿವಮೊಗ್ಗ, ಸಂಘದ ಮಾಜಿ ಅಧ್ಯಕ್ಷ ಎಂ.ಎನ್.ಸುಂದರ ರಾಜ್, ಪ್ರೊ.ಆಶಾಲತಾ ಇದ್ದರು.

**ಸಮ್ಮಾನದಿಂದ ಮನ ತುಂಬಿದೆ:** ಕರ್ನಾಟಕ ಸಂಘದಿಂದ ನನ್ನ ವೃತ್ತಿ ಬದಕು ತಿರುವು ಪಡೆದುಕೊಂಡಿತು. ಅನೇಕ ಸಂಘ ಸಂಸ್ಥೆಗಳು ಸಮ್ಮಾನ ಮಾಡಿರಬಹುದು. ಆದರೆ, ಇಲ್ಲಿ ಸನ್ಮಾನಿಸುತ್ತಿರುವುದರಿಂದ ಮನಸು ತುಂಬಿ ಬಂದಿದೆ. ನನ್ನ ಶೈಕ್ಷಣಿಕ ಕೆಲಸ ಕಾರ್ಯಗಳಿಗೆ ಎಂದೂ ಮನೆಯಿಂದ ಅಡ್ಡಿ ಉಂಟಾಗಲಿಲ್ಲ' ಎಂದು ಹಿರಿಯ ಸಂಶೋಧಕಿ ಟಿ.ಎನ್.ನಾಗರತ್ನ ಹೇಳಿದರು.



ಕರ್ನಾಟಕ ಸಂಘದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿಗಳಾದ ಟಿ.ಎನ್.ನಾಗರತ್ನ ಹಾಗೂ ಸಿ.ಆರ್.ಚಂದ್ರಶೇಖರ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು

# ಕೇರಳದ ರಂಗ ಮೇಳ

**ಜಿ.ಎನ್. ಮೋಹನ್/** 'ವಯಸ್ಸಾದವರು ಮಕ್ಕಳು ಬರಬೇಡಿ, ಹೃದಯದ ಸಮಸ್ಯೆ ಇರುವವರು, ಹೆಚ್ಚಿನ ಬಿ.ಪಿ. ಇರುವವರು ದಯವಿಟ್ಟು ದೂರವಿರಿ, ಸ್ಟಂಟ್ ಹಾಕಿಸಿಕೊಂಡವರು ಬರುವುದು ಒಳ್ಳೆಯದಲ್ಲ' ಎನ್ನುವ ಘೋಷಣೆ ಮೇಲಿಂದ ಮೇಲೆ ಕೇಳಿ ಬರುತ್ತಿತ್ತು. ಅದೇ ವೇಳೆ ಆಂಬುಲೆನ್ಸ್‌ಗಳು ಆ ಘೋಷಣೆ ಮಾಡುತ್ತಿದ್ದ ಜಾಗಕ್ಕೆ ಬಂದು ಆಯಕಟ್ಟಿನ ಜಾಗದಲ್ಲಿ ನಿಂತವು. ಡಾಕ್ಟರ್‌ಗಳು ತಮ್ಮ ಕಿಟ್‌ಗಳ ಸಮೇತ ತಾತ್ಕಾಲಿಕ ಚಿಕಿತ್ಸಾ ಕೇಂದ್ರ ಆರಂಭಿಸಿದರು.

ಖಂಡಿತಾ ಇದು ಯಾವುದೇ ಅವಘಡ ಸಂಭವಿಸಿದ ಜಾಗವಾಗಿರಲಿಲ್ಲ, ಭೂ ಕುಸಿತವೂ ಉಂಟಾಗಿರಲಿಲ್ಲ, ಅಪಾಯಕಾರಿ ಸಾಹಸಕ್ರೀಡೆಯ ಜಾಗವಂತೂ ಅಲ್ಲವೇ ಅಲ್ಲ. ಇದು ಕೇರಳ ಸಂಗೀತ ನಾಟಕ ಅಕಾಡೆಮಿಯ ಆವರಣದಲ್ಲಿ ಹಮ್ಮಿಕೊಂಡಿದ್ದ ನಾಟಕ ನೋಡಲು ಯಾರು ಬರಬಹುದು ಎಂದು ನೀಡುತ್ತಿದ್ದ ಸೂಚನೆಯಾಗಿತ್ತು. ಆ ವೇಳೆಗಾಗಲೇ ಇಟಲಿಯಿಂದ ಬಂದಿಳಿದಿದ್ದ 'ಥರ್ಡ್ ರೀಚ್' ನಾಟಕ ನೋಡಲು ಸಾವಿರಾರು ಜನ ಉದ್ದೋ ಉದ್ದನೆಯ ಸರತಿ ಸಾಲಿನಲ್ಲಿ ನಿಂತಿದ್ದರು. ಹಾಗೆ ಒಂದು ಗಂಟೆಗೂ ಹೆಚ್ಚು ಕಾಲ ನಿಂತಿದ್ದ ನನಗೂ, ಹೊನ್ನಾವರದ ಕಿರಣ್ ಭಟ್‌ರಿಗೂ ಆಶ್ಚರ್ಯವೋ ಆಶ್ಚರ್ಯ. ನಾಟಕ ನೋಡಲು ಬನ್ನಿ ಎಂದು ಕರೆ ನೀಡಿದವರನ್ನಷ್ಟೇ ನೋಡಿದ್ದ ನಮಗೆ ನಾಟಕ ನೋಡಲು ಇಂತಿಂಥವರು ಬರಬೇಡಿ ಎಂದು ಕೇಳಿದ್ದು ಅದೇ ಮೊದಲು. ಸರತಿ ಸಾಲಿನಲ್ಲಿದ್ದ ಇತರರಿಗೂ ಅಂತಹದ್ದೇ ಆಶ್ಚರ್ಯವಾಗಿರಬಹುದು ಎಂದು ಅವರತ್ತ ತಿರುಗಿದರೆ ಇಲ್ಲ, ಬಿಲ್ ಕುಲ್ ಇಲ್ಲ.

ಯಾಕೆಂದರೆ ಅದು ಕೇರಳದಲ್ಲಿ ಜರುಗುತ್ತಿದ್ದ ಹತ್ತು ದಿನಗಳ ಅಂತರರಾಷ್ಟ್ರೀಯ ರಂಗ ಹಬ್ಬ. ನಾಟಕ ಎಂದರೆ ಹೀಗೇ ಎನ್ನುವ ಕಲ್ಪನೆಯನ್ನು ಒಂದೊಂದು ದೇಶವೂ ಬದಲಿಸಿ ಹಾಕುತ್ತಿತ್ತು. ಒಂದೊಂದು ನಾಟಕವೂ ತನ್ನದೇ ಆದ ಶೈಲಿಯೊಂದಿಗೆ ರಂಗಭೂಮಿಗೆ ಹೊಸದೇ ಭಾಷ್ಯ ಬರೆದಿತ್ತು. ಹಾಗಾಗಿಯೇ ಇಟಲಿಯ ರೋಮಿಯೋ ಕ್ಯಾಸ್ಟೆಲುಸ್ಸಿ ಅವರ 'ಥರ್ಡ್ ರೀಚ್' ನಾಟಕ ಎಂಬ ಹೆಸರಿನ ವಿಡಿಯೊ ಇನ್‌ಸ್ಟಾಲೇಷನ್ ಪ್ರಯೋಗ ಸಹ. ಕಳೆದ 12 ವರ್ಷಗಳಿಂದ ಇಂತಹ ಪ್ರಯೋಗಗಳಿಗೆ ಸಾಕ್ಷಿಯಾದ ಪ್ರೇಕ್ಷಕರಿಗೆ ಇದು ಮತ್ತೊಂದು ಹೊಸ ಅನುಭವಕ್ಕೆ ತೆರೆಯಲಿದ್ದ ಹೆಬ್ಬಾಗಿಲು ಆಗಿತ್ತಷ್ಟೆ.

ಕಿರಣ್ ಭಟ್, ಬಿಎಸ್‌ಎನ್‌ಎಲ್‌ನಲ್ಲಿ ಹಿರಿಯ ಅಧಿಕಾರಿಯಾಗಿದ್ದರು. ಅವರಿಗೆ ಕೇರಳಕ್ಕೆ ವರ್ಗವಾಯಿತು. ಅಲ್ಲಿದ್ದ ಎರಡು ವರ್ಷಗಳಲ್ಲಿ ಬಹುತೇಕ ದಿನಕ್ಕೊಂದು ನಾಟಕ ನೋಡುತ್ತಾ ಹೋದರು. ಇದನ್ನು ಸಂಗ್ರಹಿಸಿ ಕಟ್ಟಿಕೊಟ್ಟ ಕೃತಿಯೇ 'ರಂಗ ಕೈರಳಿ'. ಈ ಕೃತಿ ಓದುತ್ತಾ ಹೋದ ನನಗೆ ಕೇರಳದಲ್ಲಿನ ರಂಗಭೂಮಿಯ ಹುಚ್ಚಿನ ಝಲಕ್ ಸಿಕ್ಕಿಹೋಯಿತು. ಹಾಗೆ ಬರೆಯುತ್ತಾ ಕಿರಣ್ ಭಟ್ ಅಲ್ಲಿ ಪ್ರತೀ ವರ್ಷ ಜರುಗುವ ಅಂತರರಾಷ್ಟ್ರೀಯ ರಂಗಭೂಮಿ ಉತ್ಸವದ ಬಗ್ಗೆ ಪ್ರಸ್ತಾಪ ಮಾಡಿದ್ದರು. ಅಲ್ಲಿಗೆ ಕೇರಳಕ್ಕೆ ಹೋಗಿ ಅಲ್ಲಿನ ರಂಗ ಹುಚ್ಚಿನ ಕೈಕುಲುಕಿ ನೋಡಿಯೇಬಿಡುವ ಹುಕಿ ನನ್ನೊಳಗೆ ಹೊಕ್ಕಿತು.

ಕೇರಳಕ್ಕೆ ಇದು 13ನೆಯ ವರ್ಷದ ರಂಗ ಉತ್ಸವ. 2008ರಲ್ಲಿ ಆರಂಭವಾದ ಈ ಉತ್ಸವ ಪ್ರತೀ ವರ್ಷ ತನ್ನನ್ನು ತಾನೇ ಇನ್ನಷ್ಟು ಪುನರ್ ರೂಪಿಸಿಕೊಳ್ಳುತ್ತಾ ಈಗ ಇಡೀ ಜಗತ್ತು ಈ ನಾಟಕೋತ್ಸವಕ್ಕೆ ಕಾಯುತ್ತಾ ಕೂರುವಷ್ಟರ ಮಟ್ಟಿಗೆ ಬೆಳೆದು ಬಿಟ್ಟಿದೆ. ಉತ್ಸವದ ಮುಖ್ಯ ತಾಣವಾದ ಕೇರಳ ಸಂಗೀತ ನಾಟಕ ಅಕಾಡೆಮಿಯ ಆವರಣಕ್ಕೆ ಕಾಲಿಡುತ್ತಿದ್ದಂತೆಯೇ ನಮಗೆ ಕಂಡದ್ದು ಗಿರೀಶ ಕಾರ್ನಾಡ, ಸಫ್ದರ್ ಹಷ್ಮಿ, ಬಾದಲ್ ಸರ್ಕಾರ್, ಶೇಕ್ಸ್‌ಪಿಯರ್.. ಹೀಗೆ ಸಾಲು ಸಾಲು ರಂಗ ದಿಗ್ಗಜರು. ಅಲ್ಲಿದ್ದ ಎರಡು ಕಾಯಂ ರಂಗಮಂದಿರಗಳ ಜೊತೆಗೆ ಉತ್ಸವಕ್ಕಾಗಿಯೇ ಎದ್ದು ನಿಂತ ಸಾವಿರಕ್ಕೂ ಹೆಚ್ಚು ಜನ ಕೂರುವ ಸಾಮರ್ಥ್ಯವಿರುವ ತಾತ್ಕಾಲಿಕ ರಂಗಮಂದಿರಗಳು. ಎಲ್ಲೆಡೆಯೂ ನಾಟಕದ ಲೈಟ್‌ಗಳು, ಪರದೆಗಳು, ಮೈಕ್‌ಗಳನ್ನು ಹೊತ್ತವರ ಸರಬರ ಓಡಾಟ.

ಇಲ್ಲಿ ರಂಗ ಉತ್ಸವ ಎಂದರೆ ಅದು ಉತ್ಸವ ಸಂಘಟಿಸುವ ಸಂಗೀತ ನಾಟಕ ಅಕಾಡೆಮಿಯ ಕಾರ್ಯಕ್ರಮ ಮಾತ್ರವಲ್ಲ, ಲಲಿತಕಲಾ ಅಕಾಡೆಮಿ, ಸಾಹಿತ್ಯ ಅಕಾಡೆಮಿ, ಕೇರಳದಲ್ಲಿರುವ ಡ್ರಾಮಾ ಸ್ಕೂಲ್, ಯುವಜನ ಮತ್ತು ಕ್ರೀಡಾ ಕೇಂದ್ರ ಎಲ್ಲವೂ ತಮ್ಮದೇ ಉತ್ಸವವೇನೋ ಎನ್ನುವಂತೆ ಕೈ ಜೋಡಿಸುತ್ತವೆ.ಕೇರಳದ ಕಲಾವಿದರು ತಿಂಗಳಿಗೂ ಮುಂಚೆಯೇ ಬೀದಿಗಿಳಿದು 'ಗೋಡೆ ಬರಹವೂ ಕಲೆಯೇ' ಎನ್ನುವ ಘೋಷಣೆಯೊಂದಿಗೆ ಚಂದದ ಚಿತ್ತಾರಗಳನ್ನು ಬಿಡಿಸುತ್ತಾರೆ. ಆಟೋಗಳನ್ನೇ ಮಿನಿ ವೇದಿಕೆಯಾಗಿ ಪರಿವರ್ತಿಸಿಕೊಂಡ ಬೀದಿ ನಾಟಕ ತಂಡಗಳು ತ್ರಿಶ್ಶೂರಿನ ಮೂಲೆ ಮೂಲೆಗೆ ಹೋಗಿ ಉತ್ಸವದ ಕುತೂಹಲ ಉಕ್ಕುವಂತೆ ಮಾಡುತ್ತವೆ. ಗುರುವಾಯೂರಿನಲ್ಲಿರುವ ಮ್ಯೂರಲ್ ಕಲಾವಿದರು ನಾಟಕ ಅಕಾಡೆಮಿಯ ರಂಗ ಮಂದಿರಗಳ ಗೋಡೆಗಳ ಮೇಲೆ ಚಿತ್ತಾರ ಮೂಡಿಸುತ್ತಾರೆ.

ಈ ವರ್ಷದ ನಾಟಕೋತ್ಸವಕ್ಕೆ ಯಾವ ವರ್ಷವೂ ಇಲ್ಲದಷ್ಟು ರಂಗು ಬಂದಿತ್ತು. ಇದಕ್ಕೆ ಕಾರಣವೂ ಇತ್ತು. ಕೋವಿಡ್, ಎರಡು ವರ್ಷದ ನಾಟಕೋತ್ಸವವನ್ನು ನುಂಗಿ ಹಾಕಿತ್ತು. ಹಾಗಾಗಿಯೇ ಈ ಬಾರಿ ಎಲ್ಲಿ ನೋಡಿದರೂ ಜನ. ಕೋವಿಡ್ ಮಾನವೀಯತೆಯನ್ನೇ ಕಿತ್ತು ತಿಂದಿತ್ತು. ಅಲ್ಲಿಯವರೆಗೆ ಇದ್ದ ವಲಸೆ, ಬಡತನಕ್ಕೆ ಇನ್ನಷ್ಟು ಬೇಗೆಯನ್ನು ಸೇರಿಸಿತ್ತು. ಆ ಕಾರಣಕ್ಕಾಗಿಯೇ 'ಮಾನವೀಯತೆ ಒಗ್ಗೂಡಬೇಕು' ಎನ್ನುವುದು ಈ ಬಾರಿಯ ರಂಗ ಉತ್ಸವದ ಮೂಲ ಆಶಯ ಹಾಗೂ ಘೋಷಣೆಯಾಗಿತ್ತು.

ಹಾಗಾಗಿಯೇ ಇಡೀ ನಾಟಕಗಳು ಈ ಮಾನವೀಯತೆಯ ಸುತ್ತಲೇ ಇರುವಂತೆ ನೋಡಿಕೊಳ್ಳಲಾಗಿತ್ತು. 'ಸಾಂಸ್ಕೃತಿಕ ಅಭಿವ್ಯಕ್ತಿ ಎನ್ನುವುದು ಸಮಾಜದ ಬೆನ್ನೆಲುಬು. ದುರಿತ ಕಾಲದಲ್ಲಿ ಪರಸ್ಪರ ವಿಶ್ವಾಸ ತುಂಬಲು, ಜೊತೆಗಿದ್ದೇವೆ ಎನ್ನುವ ಭಾವ ತುಂಬಲು ಇಂತಹ ಉತ್ಸವ ಅತಿ ಮುಖ್ಯ' ಎಂದಿದ್ದು ಕೇರಳದ ಸಂಸ್ಕೃತಿ ಸಚಿವ ಸಾಜಿ ಚೆರಿಯನ್.

ಮಾನವೀಯತೆ ಎನ್ನುವ ಗುಪ್ತಗಾಮಿನಿಯನ್ನು ಅರಸುತ್ತಿದ್ದ ಅನೇಕ ದೇಶಗಳು ಅಲ್ಲಿದ್ದವು. ಅನೇಕ ರಂಗತಂಡಗಳು, ಅಸಂಖ್ಯಾತ ಪ್ರೇಕ್ಷಕರೂ ಇದ್ದರು. ಹೀಗಾಗಿಯೇ ಉತ್ಸವದ ಹತ್ತೂ ದಿನ ಎಲ್ಲೆಂದರಲ್ಲಿ ವಾದ್ಯಗಳು ಮೊಳಗುತ್ತಿದ್ದವು, ಇನ್ನೆಲ್ಲೋ ಹಾಡಿಗೆ ಅನೇಕರು ಹೆಜ್ಜೆ ಹಾಕುತ್ತಿದ್ದರು, ಟೀ ಅಂಗಡಿಯ ಬದಿಯಲ್ಲಿ ಮಿನಿ ವಿಚಾರ ಸಂಕಿರಣವೇ ಜರುಗಿ ಹೋಗುತ್ತಿತ್ತು. ಈ ಮಧ್ಯೆ ಕೆಂಪು ಕೋಳಿ ವೇಷ ಧರಿಸಿದ ಬೀದಿ ರಂಗ ಕಲಾವಿದರು ಎಲ್ಲರ ಮುಖದಲ್ಲಿ ನಗೆ ಅರಳಿಸಿ ಹೋಗುತ್ತಿದ್ದರು. ಎಷ್ಟು ಸೆಲ್ಫಿಗಳು ಕ್ಲಿಕ್ಕಿಸಲ್ಪಟ್ಟವೋ ಲೆಕ್ಕ ಇಟ್ಟವರಾರು?

ದಕ್ಷಿಣ ಆಫ್ರಿಕಾ, ಲೆಬನಾನ್, ಇಟಲಿ, ಫ್ರಾನ್ಸ್, ಇಂಗ್ಲೆಂಡ್, ಪ್ಯಾಲೆಸ್ಟೀನ್, ಡೆನ್ಮಾರ್ಕ್, ಇಸ್ರೇಲ್ ದೇಶಗಳ ಜೊತೆಗೆ ಕೇರಳ, ಕರ್ನಾಟಕ, ಮಹಾರಾಷ್ಟ್ರ, ಬಿಹಾರ್, ದೆಹಲಿ, ತಮಿಳುನಾಡು, ಪುದುಚೇರಿ, ಅಸ್ಸಾಂ ರಾಜ್ಯಗಳ ನಾಟಕಗಳೂ ಬೆಸಗೊಂಡವು. ಮಾರನೆಯ ದಿನ ನಾಟಕ ತಂಡದೊಡನೆ ಕೂತು ನಾಟಕವನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ನಡೆಯಿತು.

ಇದೇ ಮೊದಲ ಬಾರಿಗೆ ಮಹಿಳೆಯರಿಗಾಗಿಯೇ ರಂಗ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಇಲ್ಲಿನ ನಾಟಕ ಶಾಲೆ ಇದೇ ಮೊದಲ ಬಾರಿಗೆ ಅಂತರರಾಷ್ಟ್ರೀಯ ನಾಟಕ ಶಾಲೆಗಳ ಉತ್ಸವವನ್ನೂ ನಡೆಸಿತು. ಉತ್ಸವದ ಪೂರ್ವಭಾವಿಯಾಗಿ ಅನೇಕ ಸಂಕಿರಣಗಳೂ ರಂಗ ಗಣ್ಯರ ಉಪನ್ಯಾಸಗಳೂ ಜರುಗಿದವು. ನಾಟಕದ ಅಂಗಳದಲ್ಲಿ ಹಾಡಿನ ಹೊಳೆಯೂ ಹರಿಯಲಿ ಎಂಬಂತೆ ದೇಶದ ನಾನಾ ಕಡೆಯ ಮ್ಯೂಸಿಕ್ ಬ್ಯಾಂಡ್‌ಗಳನ್ನೂ ಕರೆಸಲಾಗಿತ್ತು.

# ಹಳದಿ ಮಾರ್ಗ: ಸವಾರರಿಗೆ ನೆಮ್ಮದಿ


ಹಳದಿ ಮಾರ್ಗದಲ್ಲಿ ಮೆಟ್ರೊ ಸಂಚಾರ ವಾಣಿಜ್ಯ ಸಂಚಾರ ಆರಂಭವಾದ ಮೇಲೆ ವಾಹನ ಸವಾರರಲ್ಲಿ ತುಸು ನಿರಾಳ ತಂದಿದೆ.

### ಎಲೆಕ್ಟ್ರಾನಿಕ್ ಸಿಟಿ ಭಾಗದಲ್ಲಿ ತಗ್ಗಿದ ದಟ್ಟಣೆ, ಸಂಚಾರ ನಿರ್ವಹಣಾ ಕೇಂದ್ರದ ವಿಶ್ಲೇಷಣೆ

**ಸಾರ್ವಜನಿಕ ಸಾರಿಗೆ ಬಳಸಲು ಮನವಿ:**
ಹಳದಿ ಮಾರ್ಗದಲ್ಲಿ ಮೆಟ್ರೊ ಸಂಚಾರ ಆರಂಭಿಸಿದ ನಂತರ ಸಾಫ್ಟ್‌ವೇರ್ ಕಂಪನಿಗಳು ತಮ್ಮ ಸಂಸ್ಥೆಯ ಉದ್ಯೋಗಿಗಳಿಗೆ 'ನಮ್ಮ ಮೆಟ್ರೊ' ಬಳಸುವಂತೆ ಕೋರಿವೆ. ಹಳದಿ ಮಾರ್ಗದ ಮೆಟ್ರೊ ಸಂಚಾರ ದಟ್ಟಣೆ ಇಲ್ಲದ ಪ್ರಯಾಣಕ್ಕೆ ಉತ್ತಮ. ಅದರಲ್ಲೂ ಜನಸಂದಣಿ ಹೆಚ್ಚಿರುವ ಸಮಯದಲ್ಲಿ ಇದು ತುಂಬಾ ಅನುಕೂಲಕರ' ಎಂದು ಇ?ಮೇಲ್ ಮೂಲಕ ಇನ್ಫೊಸಿಸ್ ಸಂಸ್ಥೆಯು ತನ್ನ ಉದ್ಯೋಗಿಗಳಿಗೆ ಸಂದೇಶ ನೀಡಿದೆ.

**ಬೆಂಗಳೂರು:** 'ನಮ್ಮ ಮೆಟ್ರೊ'ದ ಹಳದಿ ಮಾರ್ಗ ಉದ್ಘಾಟನೆಯಾದ ಬಳಿಕ ನಗರದ ದಕ್ಷಿಣ ಭಾಗದಲ್ಲಿ ವಾಹನ ದಟ್ಟಣೆಯ ಸಮಸ್ಯೆ ಕೊಂಚ ತಗ್ಗಿದೆ. ಕಳೆದ 15 ದಿನಗಳಲ್ಲಿ ವಿವಿಧ ಜಂಕ್ಷನ್ ಹಾಗೂ ರಸ್ತೆಗಳಲ್ಲಿ ಶೇ 10ರಿಂದ ಶೇ 25ರಷ್ಟು ದಟ್ಟಣೆ ಸಮಸ್ಯೆ ಇಳಿಕೆ ಕಂಡಿದೆ ಎಂದು ನಗರ ಸಂಚಾರ ನಿರ್ವಹಣಾ ಕೇಂದ್ರದ ಅಧಿಕಾರಿಗಳು ವಿಶ್ಲೇಷಿಸಿದ್ದಾರೆ. ಎಲೆಕ್ಟ್ರಾನಿಕ್ ಸಿಟಿ ಭಾಗದಲ್ಲಿ ನಿತ್ಯ ದಟ್ಟಣೆಯಲ್ಲಿ ಸಿಲುಕಿ ಹೈರಾಣಾಗುತ್ತಿದ್ದ ಸವಾರರಿಗೆ ತುಸು ನೆಮ್ಮದಿ ತಂದಿದೆ. ದಟ್ಟಣೆಯ ಅವಧಿಯಲ್ಲಿ ಸಾಲುಗಟ್ಟಿ ನಿಲ್ಲುತ್ತಿದ್ದ ವಾಹನಗಳು ಇದೀಗ ಅದೇ ಜಂಕ್ಷನ್ ಹಾಗೂ ರಸ್ತೆಗಳಲ್ಲಿ ಸುಗಮವಾಗಿ ಚಲಿಸುತ್ತಿವೆ.

ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರ ದವರೆಗೆ ಹಳದಿ ಮಾರ್ಗದ ಉದ್ಘಾಟನೆ ವಿಳಂಬವಾದ ಕಾರಣ ಈ ಭಾಗದ ಹತ್ತಾರು ಜಂಕ್ಷನ್ ಗಳಲ್ಲಿ ಸಮಸ್ಯೆ ದುಪ್ಪಟ್ಟಾಗಿತ್ತು. ಹಳದಿ ಮಾರ್ಗದಲ್ಲಿ ಆಗಸ್ಟ್ 11ರಿಂದ ವಾಣಿಜ್ಯ ಸಂಚಾರ ಆರಂಭವಾದ ಮೇಲೆ ವಾಹನ ಸವಾರರಲ್ಲಿ ತುಸು ನಿರಾಳ ತಂದಿದೆ. ನಿತ್ಯ ಒಂದು ಲಕ್ಷ ಮಂದಿ 'ನಮ್ಮ ಮೆಟ್ರೊ'ದ ಹಳದಿ ಮಾರ್ಗವನ್ನು ಅವಲಂಬಿಸಿದ್ದರಿಂದ ರಸ್ತೆಗೆ ಇಳಿಯುತ್ತಿರುವ ಖಾಸಗಿ ವಾಹನಗಳ ಸಂಖ್ಯೆ ತಗ್ಗಿದೆ. ರಾಗಿಗುಡ್ಡ, ಜಯದೇವ ಆಸ್ಪತ್ರೆ ಜಂಕ್ಷನ್, ಸೆಂಟ್ರಲ್ ಸಿಲ್ಕ್ ಬೋರ್ಡ್, ಹೊಂಗಸಂದ್ರ, ಕೂಡ್ಲುಗೇಟ್, ಹೊಸರೋಡ್, ಹೆಬ್ಬಗೋಡಿ, ಬೊಮ್ಮಸಂದ್ರ ಭಾಗದಲ್ಲಿ ವಿಪರೀತ ದಟ್ಟಣೆ ಆಗುತ್ತಿತ್ತು. ಅದರಲ್ಲೂ ಎಲೆಕ್ಟ್ರಾನಿಕ್ ಸಿಟಿಯಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿದ್ದವು. ಎಲೆಕ್ಟ್ರಾನಿಕ್ ಸಿಟಿಯಲ್ಲಿ ಸಾಫ್ಟ್‌ವೇರ್ ಕಂಪನಿಗಳಿದ್ದು, ಸಮಯಕ್ಕೆ ಸರಿಯಾಗಿ ಕೆಲಸಕ್ಕೆ ತೆರಳುವುದಕ್ಕೂ ಟೆಕಿಗಳಿಗೆ ಸಾಧ್ಯ ಆಗುತ್ತಿರಲಿಲ್ಲ. ಈಗ ಸಮಸ್ಯೆ ತುಸು ತಗ್ಗಿದೆ.

ಬೊಮ್ಮನಹಳ್ಳಿ, ಎಲೆಕ್ಟ್ರಾನಿಕ್ ಸಿಟಿ ಹಾಗೂ ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಉಂಟಾಗುತ್ತಿದ್ದ ದಟ್ಟಣೆಯಿಂದ ಪಾರಾಗಿ ಅರ್ಧ ತಾಸಿನನಲ್ಲಿ ಪ್ರಯಾಣಿಕರು ಹಳದಿ ಮಾರ್ಗದ ಒಂದು ತುದಿಯಿಂದ ಮತ್ತೊಂದು ಬದಿಗೆ ತಲುಪುತ್ತಿದ್ದಾರೆ.

ಹಳದಿ ಮಾರ್ಗದ ಆರಂಭದಿಂದ ಮೆಟ್ರೊ ಜಾಲವು 96 ಕಿ.ಮೀ.ಗೆ ವಿಸ್ತರಣೆ ಯಾಗಿದೆ. ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಐ.ಟಿ ಕಂಪನಿಗಳಿಗೆ ಸಂಪರ್ಕಿಸುವಲ್ಲಿ ಹಳದಿ ಮಾರ್ಗವು ನಿರ್ಣಾಯಕ ಪಾತ್ರ ವಹಿಸುತ್ತಿದೆ. ದಟ್ಟಣೆ ಅವಧಿಯಾದ ಬೆಳಿಗ್ಗೆ 7ರಿಂದ 11 ಹಾಗೂ ಸಂಜೆ 4ರಿಂದ ರಾತ್ರಿ 9ರವರೆಗೆ ಹಳದಿ ಮಾರ್ಗ ಸಂಪರ್ಕಿಸುವ ಪ್ರಮುಖ ಜಂಕ್ಷನ್ ಹಾಗೂ ರಸ್ತೆಗಳಲ್ಲಿ ವಾಹನ ದಟ್ಟಣೆ ಇಳಿಕೆ ಕಂಡಿದೆ. ಸೋಮವಾರ ಹಾಗೂ ಮಂಗಳವಾರದ ದಟ್ಟಣೆ ಅವಧಿಯಲ್ಲಿ ವಾಹನಗಳ ಸಂಚಾರವನ್ನ ಆಧರಿಸಿ ಅಸ್ತ್ರಂ ಆ?ಯಪ್ ಮೂಲಕ ವಿಶ್ಲೇಷಣೆಗೆ ಒಳಪಡಿಸಲಾ ಗಿದೆ. ಆ ಅವಧಿಯಲ್ಲಿ ಸಾಕಷ್ಟು ಸುಧಾರಣೆ ಆಗಿರುವುದು ಕಂಡುಬಂದಿದೆ' ಎಂದು ಸಂಚಾರ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಅಂದಾಜಿನ ಪ್ರಕಾರ ಹಳದಿ ಮಾರ್ಗದಲ್ಲಿ ಪ್ರತಿನಿತ್ಯ 90 ಸಾವಿರದಿಂದ 1 ಲಕ್ಷದವರೆಗೆ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ. ಮೆಟ್ರೊ ಕೋಚ್‌ಗಳ ಕೊರತೆಯ ಕಾರಣಕ್ಕೆ ಕೆಲವೇ ಮೆಟ್ರೊ ರೈಲುಗಳು ಸಂಚಾರ ನಡೆಸುತ್ತಿವೆ. ಕೋಚ್‌ಗಳ ಸಂಖ್ಯೆ ಹೆಚ್ಚಾದ ಮೇಲೆ ಹಳದಿ ಮಾರ್ಗದಲ್ಲಿ ಪ್ರಯಾಣಿಕರ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆ ಆಗಲಿದೆ. ಆಗ ರಸ್ತೆಗೆ ಇಳಿಯುವ ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳ ಸಂಖ್ಯೆ ಮತ್ತಷ್ಟು ಕಡಿಮೆ ಆಗಲಿದೆ' ಎಂದು ಪೊಲೀಸರು ತಿಳಿಸಿದರು.

**ಪರಿಹಾರ ಸಿಕ್ಕಿದೆ:** ಸೆಂಟ್ರಲ್ ಸಿಲ್ಕ್ ಬೋರ್ಡ್ ಹಾಗೂ ಎಲೆಕ್ಟ್ರಾನಿಕ್ ಸಿಟಿ ಭಾಗದಲ್ಲಿ ಎರಡು ಜಂಕ್ಷನ್‌ಗಳನ್ನು ದಾಟುವುದಕ್ಕೆ ಹರಸಾಹಸ ಪಡಬೇಕಿತ್ತು. ಹಳದಿ ಮಾರ್ಗ ಆರಂಭವಾದ ಬಳಿಕ ಸಮಸ್ಯೆಗೆ ಸ್ವಲ್ಪಮಟ್ಟಿಗೆ ಪರಿಹಾರ ಸಿಕ್ಕಿದೆ.

# ಮನುವಾದಿಗಳಿಂದ ಸಂವಿಧಾನಕ್ಕೆ ಅಪಾಯ


ಹರಿಹರದಲ್ಲಿ 'ಎದ್ದೇಳು ಕರ್ನಾಟಕ' ಸಂಘಟನೆಯಿಂದ ಸಮಾನ ಮನಸ್ಕರ ಸಭೆ ನಡೆಯಿತು.

**ಹರಿಹರ:** 'ದೇಶದ ಸಂವಿಧಾನಕ್ಕೆ ಮನುವಾದಿಗಳಿಂದ ಆಪತ್ತು ಎದುರಾಗಿದೆ' ಎಂದು 'ಎದ್ದೇಳು ಕರ್ನಾಟಕ' ಸಂಘಟನೆಯ ಮುಖಂಡ ಅನೀಸ್ ಪಾಷಾ ಆತಂಕ ವ್ಯಕ್ತಪಡಿಸಿದರು.

'ಸಂವಿಧಾನ ರಕ್ಷಣಾ ಪಡೆ' ರಚಿಸುವ ಹಿನ್ನೆಲೆಯಲ್ಲಿ ನಗರದಲ್ಲಿ ನಡೆದ ಸಮಾನ ಮನಸ್ಕರ ಸಭೆಯಲ್ಲಿ ಮಾತನಾಡಿದರು.

'ಸಂವಿಧಾನದ ಮೂಲ ಆಶಯಕ್ಕೆ ಧಕ್ಕೆಯಾದರೆ ದೇಶದ ಶೋಷಿತರು ಹಾಗೂ ಮಹಿಳೆಯರ ಹಕ್ಕುಗಳಿಗೆ ಘಾಸಿಯಾಗುವ ಅಪಾಯವಿದೆ. ಬಿಜೆಪಿ ಹಾಗೂ ಅದರ ಸಹ ಸಂಘಟನೆಗಳ ಮುಖಂಡರು ಸಂವಿಧಾನ ಬದಲಿಸುವ ಮಾತು ಹೇಳುತ್ತಿರುವುದು ಆತಂಕ ಮೂಡಿಸಿದೆ' ಎಂದರು.

'ಸಂವಿಧಾನ ರಕ್ಷಣಾ ಪಡೆಯನ್ನು ರಾಜ್ಯದ ಎಲ್ಲಾ ತಾಲ್ಲೂಕು, ಜಿಲ್ಲೆಗಳಲ್ಲಿ ರಚಿಸಲಾಗುತ್ತಿದೆ. ಪ್ರಜ್ಞಾವಂತರು ಈ ಪಡೆಗೆ ಶಕ್ತಿ ತುಂಬಬೇಕು' ಎಂದು ತಿಳಿಸಿದರು.

'ವಿವಿಧ ಧರ್ಮಗಳಿಗೆ ಒಂದೊಂದು ಧರ್ಮಗ್ರಂಥ ಇರುವಂತೆಯೇ ಸಂವಿಧಾನವು ಭಾರತೀಯರ ಧರ್ಮಗ್ರಂಥವಾಗಿದೆ' ಎಂದು ಎದ್ದೇಳು ಕರ್ನಾಟಕ ಸಂಘಟನೆಯ ಮುಖಂಡ ಜೆ.ಯಾದವರೆಡ್ಡಿ ಹೇಳಿದರು. ಅಸಂಖ್ಯಾತ ಜಾತಿ, ಜನಾಂಗ, ಧರ್ಮ, ಸಂಸ್ಕೃತಿ, ಪರಂಪರೆಯ ಜನರನ್ನು ಹೊಂದಿರುವ ಜಗತ್ತಿನ ಬೃಹತ್ ರಾಷ್ಟ್ರ ಎನಿಸಿದ ಭಾರತಕ್ಕೆ ಸಂವಿಧಾನವೇ ಮೂಲ ಆಧಾರ. ಅದರ ರಕ್ಷಣೆಗೆ ಎಲ್ಲರೂ ಕೈ ಜೋಡಿಸಬೇಕು' ಎಂದು ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಟಿ.ಮುರುಗೇಶಪ್ಪ ಅಭಿಪ್ರಾಯಪಟ್ಟರು.

'ಸಂವಿಧಾನದ ತಿರುಳನ್ನು ಜನಸಾಮಾನ್ಯರಿಗೆ ತಿಳಿಸುವ ಉದ್ದೇಶದಿಂದ ಕೈಪಿಡಿ ಪ್ರಕಟಿಸಿ, ಹಂಚಿಕೆ ಮಾಡಿ, ಜಾಗೃತಿ ಮೂಡಿಸುವ ಅಗತ್ಯವಿದೆ' ಎಂದು ಸಾಮಾಜಿಕ ಕಾರ್ಯಕರ್ತ ಬಿ.ಮಗ್ದುಮ್ ಹೇಳಿದರು.

ವಿವಿಧ ಸಂಘಟನೆಗಳ ಪದಾಧಿಕಾರಿಗಳಾದ ಚನ್ನಗಿರಿಯ ಟಿ.ರುದ್ರಪ್ಪ, ತಿಪ್ಪಣ್ಣ ಕತ್ತಲಗೆರೆ, ವೈ.ಮಲ್ಲಿನಾಥ, ಬಿಎಸ್‌ಪಿ ಮುಖಂಡ ಡಿ.ಹನುಮಂತಪ್ಪ, ಭಾಗ್ಯದೇವಿ, ಜಮೀಲಾಬಿ, ದೇವೇಂದ್ರಪ್ಪ, ಎಂ.ಕೃಷ್ಣ, ಪ್ರೀತಮ್ ಬಾಬು, ರಿಯಾಜ್ ಖಾದ್ರಿ, ಡಾ.ಮೊಹಮ್ಮದ್ ಇಸಾಕ್, ನಿಂಗಪ್ಪ, ಮೊಹಮ್ಮದ್ ಶಾಹೀದ್, ಮೊಹಮ್ಮದ್ ಅಶ್ಫಾಖ್ ಇತರರಿದ್ದರು.

# ಕಲೆಗೆ ಬಹುನೋಟ ಅಗತ್ಯ


ಮೈಸೂರಿನ ಕಾವಾದಲ್ಲಿ ಆಯೋಜಿಸಿದ್ದ ವಿಚಾರಸಂಕಿರಣವನ್ನು ರಂಗಕರ್ಮಿ ಸಿ.ಬಸವಲಿಂಗಯ್ಯ ಉದ್ಘಾಟಿಸಿದರು.

### ವಿಚಾರ ಸಂಕಿರಣದಲ್ಲಿ ರಂಗಕರ್ಮಿ ಸಿ.ಬಸವಲಿಂಗಯ್ಯ ಅಭಿಮತ

**ಭಾರತೀಯ ಕಲಾಭಿವ್ಯಕ್ತಿಯು ಭಿನ್ನವಾಗಿದ್ದು, ಆರಾಧನೆಯ ವಸ್ತುವಾ ಗಿದೆ. ಕಲೆಯನ್ನು ನೋಡುವ ದೃಷ್ಟಿಕೋನದಲ್ಲಿ ಸಾಂಸ್ಕೃತಿಕ ರಾಜಕಾರಣವೂ ಅಡಗಿದೆ. ಅಸ್ಪೃಶ್ಯ ಸಮುದಾಯಗಳಿಗೆ ದೇವರನ್ನು ನೋಡುವ ಅವಕಾಶವೇ ಇರಲಿಲ್ಲ. ಕಲ್ಪನೆಯ ದೇವರಿಗೆ ಚಿತ್ರ ಕಲಾವಿದರು ಜೀವ ಕೊಟ್ಟರು. ರಾಜ ರವಿವರ್ಮನ ದೇವರ ಪಟಗಳು ಮನೆ ಮನೆಗಳನ್ನು ತಲುಪಿದವು. ಸಮಾಜದಿಂದ ಹೊರಗಿಟ್ಟಿದ್ದ ಜನರನ್ನು ಕಲೆಯು ಒಂದಾಗಿಸಿತು' ಎಂದರು.**

**ಮೈಸೂರು:** 'ಕಲೆಯು ಚಿರಂತನತ್ವ ಪಡೆಯಬೇಕೆಂದರೆ ಬಹುನೋಟ ವನ್ನು ಸಾಧಿಸಬೇಕು' ಎಂದು ರಂಗಕರ್ಮಿ ಸಿ.ಬಸವಲಿಂಗಯ್ಯ ಪ್ರತಿಪಾದಿಸಿದರು.

ನಗರದ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜಿನಲ್ಲಿ ಮೈಸೂರು ವಿಶ್ವವಿದ್ಯಾಲಯದ ಲಲಿತಕಲಾ ಕಾಲೇಜಿನ ಗುಬ್ಬಿ ವೀರಣ್ಣ ಅಧ್ಯಯನ ಪೀಠದ ಸಹಯೋಗದಲ್ಲಿ ಆಯೋಜಿಸಿದ್ದ 'ಪ್ರದರ್ಶಕ ಕಲೆ ಮತ್ತು ದೃಶ್ಯಕಲೆಗಳ ಅನುಸಂಧಾನ' ಕುರಿತ ವಿಚಾರಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಭಾರತೀಯ ಕಲಾಭಿವ್ಯಕ್ತಿಯು ಭಿನ್ನವಾಗಿದ್ದು, ಆರಾಧನೆಯ ವಸ್ತುವಾ ಗಿದೆ. ಕಲೆಯನ್ನು ನೋಡುವ ದೃಷ್ಟಿಕೋನದಲ್ಲಿ ಸಾಂಸ್ಕೃತಿಕ ರಾಜಕಾರಣವೂ ಅಡಗಿದೆ. ಅಸ್ಪೃಶ್ಯ ಸಮುದಾಯಗಳಿಗೆ ದೇವರನ್ನು ನೋಡುವ ಅವಕಾಶವೇ ಇರಲಿಲ್ಲ. ಕಲ್ಪನೆಯ ದೇವರಿಗೆ ಚಿತ್ರ ಕಲಾವಿದರು ಜೀವ ಕೊಟ್ಟರು. ರಾಜ ರವಿವರ್ಮನ ದೇವರ ಪಟಗಳು ಮನೆ ಮನೆಗಳನ್ನು ತಲುಪಿದವು. ಸಮಾಜದಿಂದ ಹೊರಗಿಟ್ಟಿದ್ದ ಜನರನ್ನು ಕಲೆಯು ಒಂದಾಗಿಸಿತು' ಎಂದರು. ಕಲೆಗೆ ಶಿಕ್ಷಣ, ಅಕ್ಷರ ಜ್ಞಾನವೂ ಬೇಕಿಲ್ಲ. ಅಂತಸ್ತಿನ ಬೇಲಿಯೂ ಇಲ್ಲ. ರಾಜ್‌ಕುಮಾರ್ ಯಾವ ಶಿಕ್ಷಣ ಸಂಸ್ಥೆಯಲ್ಲಿ ಓದಿದ್ದರು. ರಜನಿಕಾಂತ್ ಬಸ್ ಕಂಡಕ್ಟರ್ ಆಗಿದ್ದವರು. ಆದರೆ, ಕಲೆಯ ಮೂಲಕ ಜನಪ್ರಿಯಗೊಂಡರು. ರಾಜ್‌ಕುಮಾರ್ ಆಡುವ ಕನ್ನಡ ನುಡಿ ಬೇರೆ ಯಾರಿಂದಲೂ ಬರಲಾರದು' ಎಂದು ಹೇಳಿದರು.

'ಕಲೆಗಳು ಭೂತವನ್ನೇ ಮತ್ತೆ ಮತ್ತೆ ಧ್ಯಾನ ಮಾಡುತ್ತಿದ್ದರೆ, ವರ್ತಮಾನಕ್ಕೆ ನಾವು ಬೆನ್ನನ್ನು ಇಡುತ್ತಿದ್ದೇವೆಂದೇ ಅರ್ಥ. ಭೂತವನ್ನು ಹೊಕ್ಕಿರುವ ದೇಶದ ಭವಿಷ್ಯವನ್ನು ಕಟ್ಟಲು ಸಾಧ್ಯವಿಲ್ಲ. ಜಗತ್ತು ಚಲಿಸುತ್ತಿರುವಂತೆಯೇ ಕಲಾಲೋಕವೂ ಚಲನಶೀಲವಾಗಬೇಕು' ಎಂದರು.

'ಚಿತ್ರವು ಸ್ತಬ್ಧವಾಗಿ ನಿಂತಿರಬಹುದು. ನೋಡುವವನ ಭಾವ ಚಲನಶೀಲವಾಗಿರುತ್ತದೆ. ಹೀಗಾಗಿಯೇ ಬಸವಣ್ಣ 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂದಿದ್ದರು' ಎಂದು ಹೇಳಿದರು. ನಟ ಅರುಣ್ ಸಾಗರ್, ನೃತ್ಯ ಕಲಾವಿದರಾದ ವಿದುಷಿ ತುಳಸಿ ರಾಮಚಂದ್ರ, ವಿದುಷಿ ಕರುಣಾ ವಿಜಯೇಂದ್ರ, ವಿದುಷಿ ಸಿ.ಎನ್.ಅನಿತಾ, ರಂಗಕರ್ಮಿಗಳಾದ ಪ್ರಸಾದ್ ಕುಂದೂರು, ಕೆ.ಆರ್.ನಂದಿನಿ, ದಿಗ್ವಿಜಯ ಹೆಗ್ಗೋಡು, ಮೈಸೂರು ವಿಶ್ವವಿದ್ಯಾಲಯದ ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜ, ಕಾವಾ ಡೀನ್ ಎ.ದೇವರಾಜು, ಆಡಳಿತಾಧಿಕಾರಿ ನಿರ್ಮಲಾ ಮಠಪತಿ, ಶೈಕ್ಷಣಿಕ ಸಂಯೋಜಕ ಎ.ಪಿ.ಚಂದ್ರಶೇಖರ್, ಚಿತ್ರಕಲಾ ವಿಭಾಗದ ಮುಖ್ಯಸ್ಥ ಕೆ.ರವಿಮೂರ್ತಿ, ಲಲಿತಕಲಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಅನಿತಾ ವಿಮ್ಲಾ ಬ್ರ್ಯಾಗ್ಸ್, ಯೋಗಾನಂದ ಇದ್ದರು.

### ಜಿಲ್ಲಾಮಟ್ಟದ ಸ್ಪೆಲಿಂಗ್ ಸ್ಪರ್ಧೆ 'ಸ್ಪೆಲಿಕಾನ್ಸ್'

# 'ಕಲಿಕಾ ಮನೋಭಾವದಿಂದ ಪಾಲ್ಗೊಳ್ಳಿ'



ಸ್ಪೆಲಿಂಗ್ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಕೆ.ಕೆ.ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಎಚ್.ಆರ್. ಮಂಜುನಾಥ್ ಬಹುಮಾನ ವಿತರಿಸಿದರು.

**ಚಿತ್ರದುರ್ಗ:** 'ಸ್ಪೆಲಿಂಗ್ ಸ್ಪರ್ಧೆ ಎಂದರೆ ಪದಗಳನ್ನು ಸರಿಯಾಗಿ ಬರೆಯುವುದಷ್ಟೇ ಅಲ್ಲ. ಇದು ಭಾಷೆಯ ಮೇಲಿನ ಪ್ರೀತಿ, ಗಮನ ಹಾಗೂ ಕಲಿಕೆಯ ದೃಢತೆಗೆ ಸಾಕ್ಷಿಯಾಗಿದೆ' ಎಂದು ಕೆ.ಕೆ.ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಎಚ್.ಆರ್. ಮಂಜುನಾಥ್ ತಿಳಿಸಿದರು.

ನಗರದ ಕೆ.ಕೆ.ನ್ಯಾಷನಲ್ ಸ್ಕೂಲ್ ಆವರಣದಲ್ಲಿ ಈಚೆಗೆ ಆಯೋಜಿಸಿದ್ದ ಜಿಲ್ಲಾ ಮಟ್ಟದ ಸ್ಪೆಲಿಂಗ್ ಸ್ಪರ್ಧೆ 'ಸ್ಪೆಲಿಕಾನ್ಸ್'ಗೆ ಚಾಲನೆ ನೀಡಿ ಮಾತನಾಡಿದರು.

'ಸ್ಪರ್ಧೆಯನ್ನು ಕೇವಲ ಗೆಲುವಿನ ದೃಷ್ಟಿಯಿಂದ ನೋಡುವುದಲ್ಲ. ಕಲಿಕೆಯ ಮನೋಭಾವದಿಂದ ಪಾಲ್ಗೊಳ್ಳಬೇಕು. ತಪ್ಪಾಯಿತೆಂದು ಅಂಜುವ ಅಗತ್ಯವಿಲ್ಲ' ಎಂದರು. ಒಬ್ಬ ವ್ಯಕ್ತಿ ಪದಗಳನ್ನು ಸರಿಯಾಗಿ ಬರೆಯಲು ತಿಳಿದಿದ್ದರೆ, ಅವನು ಬರವಣಿಗೆಯಲ್ಲಿ ತಪ್ಪು ಮಾಡುವ ಸಾಧ್ಯತೆ ಕಡಿಮೆ. ಸರಿಯಾದ ಸ್ಪೆಲಿಂಗ್ ನಮ್ಮ ಆಲೋಚನೆಗಳನ್ನು ಸ್ಪಷ್ಟವಾಗಿ, ಸುಂದರವಾಗಿ ಹಾಗೂ ಅರ್ಥಪೂರ್ಣವಾಗಿ ವ್ಯಕ್ತಪಡಿಸಲು ಸಹಾಯ ಮಾಡುತ್ತದೆ' ಎಂದು ತಿಳಿಸಿದರು.

'ನಿತ್ಯದ ಅಭ್ಯಾಸದಿಂದ ನೆನಪಿನ ಶಕ್ತಿ ಹೆಚ್ಚಾಗುತ್ತದೆ. ವೇದಿಕೆಯ ಮೇಲೆ ನಿಂತು ಸ್ಪೆಲಿಂಗ್ ಹೇಳುವುದು ಧೈರ್ಯ ಹಾಗೂ ಆತ್ಮವಿಶ್ವಾಸ ಬೆಳೆಸುತ್ತದೆ. ಕನ್ನಡ, ಇಂಗ್ಲಿಷ್ ಸೇರಿದಂತೆ ಬೇರೆ ಭಾಷೆಗಳ ಮೇಲೂ ಆಸಕ್ತಿ ಹೆಚ್ಚುತ್ತದೆ' ಎಂದರು.

ಕೆ.ಕೆ.ನ್ಯಾಷನಲ್ ಸ್ಕೂಲ್‌ನ ಸಾರಾಮಾಹಿನ್ (ಪ್ರಥಮ), ವಿದ್ಯಾ ವಿಕಾಸ ವಿದ್ಯಾ ಸಂಸ್ಥೆಯ ಆಯೆಷಾ ಎನ್.ಅಹಮದ್, ಎಸ್. ಬಿಂದು ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಬಹುಮಾನ ಪಡೆದರು.

ಟ್ರಸ್ಟ್ ಉಪಾಧ್ಯಕ್ಷೆ ದೇವಿಕಾ ಮಂಜುನಾಥ್, ತೀರ್ಪುಗಾರರಾಗಿ ಶಿಕ್ಷಣ ತಜ್ಞರಾದ ಸಿ.ಎಲ್. ಏಕನಾಥ್, ಶೈಲ ಜೈಕುಮಾರ್, ಯೋಗೇಶ್ ಸಹ್ಯಾದ್ರಿ ಭಾಗವಹಿಸಿದ್ದರು.

# 'ವಚನ ಬಿತ್ತನೆ ಒಳ್ಳೆಯ ಕೆಲಸ'


ವಚನಜ್ಯೋತಿ ಬಳಗ ಆಯೋಜಿಸಿದ್ದ ವಚನ ಶ್ರಾವಣ ಕಾರ್ಯಕ್ರಮದ ಸಮಾರೋಪದಲ್ಲಿ ಬಸವಣ್ಣನವರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಲಾಯಿತು.

**ಬೆಂಗಳೂರು:** 'ಶ್ರಾವಣ ಮಾಸದ ಪ್ರಯುಕ್ತ ಮಕ್ಕಳಲ್ಲಿ ವಚನ ಬಿತ್ತನೆ ನಡೆಸಿರುವುದು ಸಾರ್ಥಕ ಕಾರ್ಯ' ಎಂದು ವಚನ ತತ್ವ ಚಿಂತಕ ಮಹಾಂತೇಶ ಬಿರಾದಾರ ಶ್ಲಾಘಿಸಿದರು.

ವಚನಜ್ಯೋತಿ ಬಳಗ ವಿಜಯ ನಗರದಲ್ಲಿ ಆಯೋಜಿಸಿದ್ದ ವಚನ ಶ್ರಾವಣ ಸಮಾರೋಪದಲ್ಲಿ ಅವರು ಮಾತನಾಡಿದರು.

ಶಾಲೆಗಳಲ್ಲಿಯೇ ವಚನ ಶ್ರಾವಣ ನಡೆಸಿ ಅವುಗಳ ಅರ್ಥವನ್ನು ಮನದಟ್ಟು ಮಾಡಿಕೊಟ್ಟಿರುವುದರಿಂದ ವಿದ್ಯಾರ್ಥಿಗಳು ಸುಂದರ ಬದುಕನ್ನು ರೂಪಿಸಿಕೊಳ್ಳಲು ಅನುಕೂಲ ಆಗುತ್ತದೆ. ಕರ್ನಾಟಕದಾದ್ಯಂತ ವಚನ ಶ್ರಾವಣ ನಡೆಯಬೇಕಿದೆ ಎಂದು ಆಶಯ ವ್ಯಕ್ತಪಡಿಸಿದರು.

ಮೆಸ್ಕಾಂ ಪ್ರಧಾನ ವ್ಯವಸ್ಥಾಪಕ ಬಿ.ಎಸ್. ಮಂಜುನಾಥಸ್ವಾಮಿ ಮಾತನಾಡಿ, 'ವಚನಗಳ ತಿರುಳು ಮಕ್ಕಳ ಮನ ಮುಟ್ಟಿದರೆ ಅದರ ವ್ಯಾಪಕತೆ ಬಹು ದೊಡ್ಡದಾಗಿ ಬೆಳೆದು ಒಳ್ಳೆಯ ಸಮಾಜ ನಿರ್ಮಾಣವಾಗುತ್ತದೆ. ಬಸವಣ್ಣ ಬಯಸಿದ ಕಲ್ಯಾಣ ರಾಜ್ಯಕ್ಕೆ ವಚನ ಶ್ರಾವಣ ಮುನ್ನುಡಿಯಾಗಿದೆ' ಎಂದರು.

ಗುರುವಣ್ಣದೇವರ ಮಠದ ನಂಜುಂಡ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು. ಬಸವ ಸಮಿತಿಯ ಹಿರಿಯ ಉಪಾಧ್ಯಕ್ಷ ಪ್ರಭುದೇವ ಚಿಗಟೇರಿ, ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ್, ಬಳಗದ ಗೌರವಾಧ್ಯಕ್ಷ ಮಹೇಶ ಬೆಲ್ಲದ ಇದ್ದರು.

### ಶಿವಶರಣ ನುಲಿಯ ಚಂದಯ್ಯ ಜಯಂತ್ಯುತ್ಸವ ಸಮಾರಂಭದಲ್ಲಿ ಒತ್ತಾಯ

# ಎಡಗೈ ಅಥವಾ ಬಲಗೈ ಗುಂಪಿಗೆ ಸೇರಿಸಿ

**ಶಿವಮೊಗ್ಗ/ಆನವಟ್ಟಿ:** 'ಹಗ್ಗ ನೇಯ್ದು, ಮಾರಾಟ ಮಾಡಿ ಬದುಕು ಕಟ್ಟಿಕೊಂಡಿರುವ ಕೊರಚ ಸಮುದಾಯವನ್ನು ಒಳಮೀಸಲಾತಿ ಅಡಿ ಮೂರನೇ ಗುಂಪಿಗೆ ಸೇರಿಸುವ ಮೂಲಕ ಅನ್ಯಾಯ ಮಾಡಲಾಗಿದೆ. ಸಮುದಾಯವನ್ನು ಎಡ ಅಥವಾ ಬಲ ಪಂಥಕ್ಕೆ ಸೇರಿಸಿ. ಇಲ್ಲವೇ ಮೂರನೇ ಗುಂಪಿನಲ್ಲಿ ಶೇ 1 ಮೀಸಲಾತಿ ಹೆಚ್ಚಿಸಿ' ಎಂದು ಬೆಂಗಳೂರಿನ ಅಖಿಲ ಕರ್ನಾಟಕ ಕೊರಚ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಆದರ್ಶ ಎಲ್ಲಪ್ಪ ಸರ್ಕಾರವನ್ನು ಒತ್ತಾಯಿಸಿದರು.

ಪಟ್ಟಣದ ನೆಹರೂ ನಗರದ ಮಾರಿಕಾಂಬ ದೇವಸ್ಥಾನದ ಎದುರು ಹಮ್ಮಿಕೊಂಡಿದ್ದ 918ನೇ ಶಿವಶರಣ ನುಲಿಯ ಚಂದಯ್ಯನವರ ಜಯಂತ್ಯುತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

'ಶೈಕ್ಷಣಿಕ, ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕವಾಗಿ ಕೊರಚ ಸಮುದಾಯ ಹಿಂದೆ ಉಳಿದಿದೆ. ಎಲ್ಲರೂ ಸಂಘಟಿತವಾಗುವ ಮೂಲಕ ನ್ಯಾಯಕ್ಕಾಗಿ ಹೋರಾಡಿ ಸಮುದಾಯದ ಅಭಿವೃದ್ಧಿಗೆ ಶ್ರಮಿಸುವ ಅವಶ್ಯಕತೆ ಇದೆ. ಸಮುದಾಯದ ಯಾರೂ ಉನ್ನತ ಹುದ್ದೆಯಲ್ಲಿ ಇಲ್ಲ. ಪೋಷಕರು ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸುವ ಮೂಲಕ ಹೆಚ್ಚು ಹೆಚ್ಚು ಸರ್ಕಾರಿ ನೌಕರಿಗಳನ್ನು ಪಡೆದುಕೊಳ್ಳುವಂತೆ ಮಾಡಬೇಕು. ಶೈಕ್ಷಣಿಕ ಪ್ರಗತಿಯಿಂದ ಸಮುದಾಯದ ಅಭಿವೃದ್ಧಿ ಸಾಧ್ಯವಿದೆ' ಎಂದು ಹೇಳಿದರು.

'ಶಿವಮ್ಮಾಪುರ ಬಡಾವಣೆಯಲ್ಲಿ 40 ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸವಿದ್ದೇವೆ.


ಆನವಟ್ಟಿಯಲ್ಲಿ ನಡೆದ ನುಲಿಯ ಚಂದಯ್ಯ ಜಯಂತ್ಯುತ್ಸವವನ್ನು ಆದರ್ಶ ಎಲ್ಲಪ್ಪ ಉದ್ಘಾಟಿಸಿದರು.

ಕೊರಚ ಸಮುದಾಯದ ಯಾರೊಬ್ಬರಿಗೂ ಹಕ್ಕುಪತ್ರ ಸಿಕ್ಕಿಲ್ಲ. ಅಲೆಮಾರಿ ಬದುಕು ನಡೆಸಿ ಈಗ ಒಂದೆಡೆ ನೆಲೆಸಿದ್ದೇವೆ. ನಮಗೆ ಹಕ್ಕುಪತ್ರ ಕೊಡಿಸಬೇಕು' ಎಂದು ತಾಲ್ಲೂಕು ಘಟಕದ ಅಧ್ಯಕ್ಷ ಜಿ.ಪುಂಡಲೀಕಪ್ಪ ಮನವಿ ಮಾಡಿದರು.

ರಾಜ್ಯ ಘಟಕದ ಕಾರ್ಯಾಧ್ಯಕ್ಷ ಸಿದ್ದೇಶ್ ಮಾದಾಪುರ, ಪ್ರಧಾನ ಕಾರ್ಯದರ್ಶಿ ಕೃಷ್ಣಪ್ಪ, ಜಿಲ್ಲಾ ಘಟಕದ ಅಧ್ಯಕ್ಷ ಶ್ರೀನಿವಾಸ ಶಿವಮೊಗ್ಗ, ಉಪಾಧ್ಯಕ್ಷ ಕೆರಿಯಪ್ಪ ಆನವಟ್ಟಿ, ತಾಲ್ಲೂಕು ಘಟಕದ ಗೌರವಾಧ್ಯಕ್ಷ ಹನುಮಂತಪ್ಪ ಬಾವಿಕಟ್ಟಿ, ಉಪಾಧ್ಯಕ್ಷರಾದ ಸಿ. ಅರುಣಕುಮಾರ್, ಸಚಿನ್ ಎಸ್. ಶಿಕಾರಿ, ಕಾರ್ಯದರ್ಶಿ ಲೋಕೇಶ್, ಸಹ ಕಾರ್ಯದರ್ಶಿ ಸಿ. ನಾಗರಾಜ, ಖಜಾಂಚಿ ಮಂಜಪ್ಪ ಬಿಳವಾಣಿ, ಮುಖಂಡರಾದ ಚೌಟಿ ಚಂದ್ರಶೇಖರ್ ಪಾಟೀಲ್, ಜೆ. ಚಂದ್ರಶೇಖರಪ್ಪ, ಮಧುಕೇಶ್ವರ್ ಪಾಟೀಲ್, ಸದಾನಂದ ಗೌಡ ಬಿಳಗಲಿ, ಅನೀಶ್ ಪಾಟೀಲ್ ಇದ್ದರು.

# ಬಾನು ದಸರಾ ಉದ್ಘಾಟಿಸಿದರೆ ಕಪ್ಪು ಬಾವುಟ



ಚನ್ನಪಟ್ಟಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಆಜಾದ್ ಬ್ರಿಗೇಡ್ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಗಜೇಂದ್ರ ಸಿಂಗ್ ಮಾತನಾಡಿದರು. ಪದಾಧಿಕಾರಿಗಳಾದ ರಘು ಪೇಟೆ, ಎಂ.ಪಿ. ಆನಂದ್ ಕುಮಾರ್, ಶ್ರೀಹರಿ, ವಡ್ಡರಹಳ್ಳಿ ಹನುಮಂತು ಹಾಗೂ ಇತರು ಇದ್ದಾರೆ.

**ಚನ್ನಪಟ್ಟಣ:** 'ಮುಸ್ಲಿಂ ಎಂಬ ಕಾರಣಕ್ಕೆ ಬಾನು ಮುಷ್ತಾಕ್ ನಾಡಹಬ್ಬ ದಸರಾ ಉತ್ಸವದ ಉದ್ಘಾಟನೆ ಮಾಡುವುದನ್ನು ವಿರೋಧಿಸುತ್ತಿಲ್ಲ. ಬಾನು ಅವರು ಭುವನೇಶ್ವರಿಯನ್ನು ಅವಹೇಳನ ಮಾಡಿದ ಕಾರಣ ವಿರೋಧಿಸುತ್ತಿದ್ದೇವೆ' ಎಂದು ಆಜಾದ್ ಬ್ರಿಗೇಡ್ ಸಂಘಟನೆ ಹೇಳಿದೆ.

ಬಹುಸಂಖ್ಯಾತ ಹಿಂದೂಗಳು ಪವಿತ್ರವೆಂದು ಭಾವಿಸುವ ಅರಿಶಿಣ ಕುಂಕುಮದ ಬಗ್ಗೆ ದ್ವೇಷ ಭಾವನೆ ಹೊಂದಿರುವ ಹಾಗೂ ಭುವನೇಶ್ವರಿಯನ್ನು ವಿರೋಧಿಸುವ ಬಾನು ಅವರಂತಹ ಸಂಕುಚಿತ ಮನೋಭಾವದವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸಿರುವುದು ಅಕ್ಷಮ್ಯ ಎಂದು ಸಂಘಟನೆ ಹೇಳಿದೆ.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಗಜೇಂದ್ರ ಸಿಂಗ್, 2017ರಲ್ಲಿ ನಿತ್ಯೋತ್ಸವ ಕವಿ ಕೆ.ಎಸ್.ನಿಸಾರ್ ಅಹ್ಮದ್ ದಸರಾ ಉದ್ಘಾಟಿಸಿದ್ದರು. ಅವರು ಉದ್ಘಾಟನೆಗೆ ಅರ್ಹರಾಗಿದ್ದರು ಎಂದರು.

'ನಾಡಹಬ್ಬ ಉದ್ಘಾಟನೆಗೆ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿರುವುದು ರಾಜ್ಯ ಕಾಂಗ್ರೆಸ್ ಸರ್ಕಾರದ ಹಿಂದೂ ವಿರೋಧಿ ನೀತಿಗೆ ಸಾಕ್ಷಿಯಾಗಿದೆ. ಚಾಮುಂಡೇಶ್ವರಿ ಮೇಲೆ ನಂಬಿಕೆ ಇದೆ ಎಂದು ಬಾನು ಅವರಿಂದ ಮುಚ್ಚಳಿಕೆ ಬರೆಸಿಕೊಳ್ಳಬೇಕು. ಇಲ್ಲವಾದರೆ ಉದ್ಘಾಟನೆ ವೇಳೆ ಕಪ್ಪು ಬಾವುಟ ಪ್ರದರ್ಶಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು. 'ಬಾನು ಅವರಿಗೆ ಬೂಕರ್ ಪ್ರಶಸ್ತಿ ಬಂದಿದೆ ಎಂಬ ಕಾರಣಕ್ಕೆ ಅವರನ್ನು ಆಯ್ಕೆ ಮಾಡಲಾಗಿದೆ. ಆದರೆ, ಪ್ರಶಸ್ತಿ ಲಭಿಸಿರುವುದು ಅವರ ಕಥಾಸಂಕಲನವನ್ನು ಆಂಗ್ಲ ಭಾಷೆಗೆ ತರ್ಜುಮೆ ಮಾಡಿರುವ ದೀಪಾ ಭಾಸ್ತಿ ಅವರಿಗೆ. ಸರ್ಕಾರ ದೀಪಾ ಭಾಸ್ತಿ ಅವರನ್ನು ದಸರಾ ಉದ್ಘಾಟನೆಗೆ ಪರಿಗಣಿಸದೆ ಬಾನು ಅವರಿಗೆ ಅವಕಾಶ ನೀಡಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಹಿಂದೆ ಸಿದ್ದರಾಮಯ್ಯ ಮೀನು ತಿಂದು ಧರ್ಮಸ್ಥಳಕ್ಕೆ ಹೋಗಿದ್ದೆ ಎಂದು ಹೇಳುವ ಮೂಲಕ ಹಿಂದೂಗಳ ಭಾವನೆಗೆ ಧಕ್ಕೆ ತಂದಿದ್ದರು. ಅಂತೆಯೇ ದಸರಾ ಉದ್ಘಾಟನೆ ಮಾಡಿದ ನಂತರ ಬಾನು ಅವರು ಮಾಂಸ ತಿಂದು ದಸರಾ ಉದ್ಘಾಟನೆ ಮಾಡಿದೆ ಎಂದು ಹೇಳಿಕೆ ನೀಡಿದರೆ ಹಿಂದೂಗಳ ಧಾರ್ಮಿಕ ಭಾವನೆಗೆ ಉಂಟಾಗುವ ಧಕ್ಕೆಗೆ ಹೊಣೆ ಯಾರು?' ಎಂದು ಅವರು ಪ್ರಶ್ನಿಸಿದರು.

'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಚಾಮುಂಡಿ ಬೆಟ್ಟ ಹಿಂದೂಗಳ ಆಸ್ತಿಯಲ್ಲ ಎಂದು ಹೇಳಿಕೆ ನೀಡಿದ್ದಾರೆ. ಆದರೆ ಇದೇ ಶಿವಕುಮಾರ್ ಕನಕಪುರ ತಾಲ್ಲೂಕಿನ ನಲ್ಲಹಳ್ಳಿ ಗ್ರಾಮದಲ್ಲಿರುವ ಮುನೇಶ್ವರ ಬೆಟ್ಟದಲ್ಲಿ ವಿಶ್ವದ ಅತಿ ಎತ್ತರದ ಏಸು ಪ್ರತಿಮೆ ನಿರ್ಮಾಣ ಮಾಡಲು ಮುಂದಾಗಿದ್ದರು. ಮುನೇಶ್ವರ ಬೆಟ್ಟವೇನು ಅವರ ಪಿತ್ರಾರ್ಜಿತ ಆಸ್ತಿಯೇ? ಎಂದು ಪ್ರಶ್ನಿಸಿದರು. ಸಂಘಟನೆಯ ಪದಾಧಿಕಾರಿಗಳಾದ ಶ್ರೀನಿವಾಸ್, ಚಿದಾನಂದ್, ಸಂದೀಪ್, ಸುರೇಶ್, ರಾಮಕೃಷ್ಣ, ನಿಸರ್ಗ ನಾಗರೀಕ ಸೇವಾ ಸಮಿತಿಯ ಪುಟ್ಟಸ್ವಾಮಿಗೌಡ, ಎ.ವಿ. ಮದನ್, ಮಾಯಿಗೇಗೌಡ, ಬಸವರಾಜ್, ಮಾಸ್ಟರ್ ನಾಗಪ್ಪ ಹಾಗೂ ಇತರರು ಇದ್ದರು.

ನಾಡಹಬ್ಬ ಉದ್ಘಾಟನೆಗೆ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿರುವುದು ರಾಜ್ಯ ಕಾಂಗ್ರೆಸ್ ಸರ್ಕಾರದ ಹಿಂದೂ ವಿರೋಧಿ ನೀತಿಗೆ ಸಾಕ್ಷಿಯಾಗಿದೆ. ಚಾಮುಂಡೇಶ್ವರಿ ಮೇಲೆ ನಂಬಿಕೆ ಇದೆ ಎಂದು ಬಾನು ಅವರಿಂದ ಮುಚ್ಚಳಿಕೆ ಬರೆಸಿಕೊಳ್ಳಬೇಕು. ಇಲ್ಲವಾದರೆ ಉದ್ಘಾಟನೆ ವೇಳೆ ಕಪ್ಪು ಬಾವುಟ ಪ್ರದರ್ಶಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು. ಬಾನು ಅವರಿಗೆ ಬೂಕರ್ ಪ್ರಶಸ್ತಿ ಬಂದಿದೆ ಎಂಬ ಕಾರಣಕ್ಕೆ ಅವರನ್ನು ಆಯ್ಕೆ ಮಾಡಲಾಗಿದೆ. ಆದರೆ, ಪ್ರಶಸ್ತಿ ಲಭಿಸಿರುವುದು ಅವರ ಕಥಾಸಂಕಲನವನ್ನು ಆಂಗ್ಲ ಭಾಷೆಗೆ ತರ್ಜುಮೆ ಮಾಡಿರುವ ದೀಪಾ ಭಾಸ್ತಿ ಅವರಿಗೆ. ಸರ್ಕಾರ ದೀಪಾ ಭಾಸ್ತಿ ಅವರನ್ನು ದಸರಾ ಉದ್ಘಾಟನೆಗೆ ಪರಿಗಣಿಸದೆ ಬಾನು ಅವರಿಗೆ ಅವಕಾಶ ನೀಡಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

# ಅಂಧರ ಸಂಚಾರಕ್ಕೆ 'ಆನ್‌ಬೋರ್ಡ್'



ಅಂಧರಿಗೆ ಬಸ್ ಪತ್ತೆ ಹಚ್ಚಿ ಸಂಚರಿಸಲು ಸುಲಭ ಮಾಡಿಕೊಡುವ 'ಆನ್‌ಬೋರ್ಡ್' ಸಾಧನಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಬಿಎಂಟಿಸಿ ಕೇಂದ್ರ ಕಚೇರಿ ಬಳಿ ಚಾಲನೆ ನೀಡಿದರು.

**ಬೆಂಗಳೂರು:** ಅಂಧರ ಅನುಕೂಲಕ್ಕಾಗಿ ಬಿಎಂಟಿಸಿಯ 125 ಬಸ್‌ಗಳಲ್ಲಿ ಆನ್‌ಬೋರ್ಡ್ ತಂತ್ರಜ್ಞಾನ ಪರಿಚಯಿ ಸಲಾಗಿದ್ದು, ಆಗಸ್ಟ್ ಅಂತ್ಯದ ಒಳಗೆ 500 ಬಸ್‌ಗಳಲ್ಲಿ, ಆನಂತರ ಎಲ್ಲ ಬಸ್‌ಗಳಲ್ಲಿ ಈ ತಂತ್ರಜ್ಞಾನ ಅಳವಡಿಸ ಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಈ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು, 'ಕಾಂಟಿನೆಂಟಲ್ ಆಟೋಮೋಟಿವ್ ಕಾಂಪೊನೆಂಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ದೆಹಲಿ, ರೈಸ್ಡ್ ಲೈನ್ಸ್ ಫೌಂಡೇಷನ್ (ಆರ್‌ಎಲ್‌ಎಫ್) ಮತ್ತು ಎನೇಬಲ್ ಇಂಡಿಯಾ ಸಹಯೋಗದೊಂದಿಗೆ ಆನ್‌ಬೋರ್ಡ್ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿತ್ತು' ಎಂದು ತಿಳಿಸಿದರು.

'ಈ ಸಾಧನವನ್ನು ಪ್ರಾಯೋಗಿಕ ವಾಗಿ 401ಕೆ ಮತ್ತು 242ಬಿ ಮಾರ್ಗದ 25 ಬಸ್ಸುಗಳಲ್ಲಿ ಅಳವಡಿಸಲಾಗಿತ್ತು. ದೃಷ್ಟಿದೋಷ ಇರುವ ಪ್ರಯಾಣಿಕರು ಹೆಚ್ಚಾಗಿ ಪ್ರಯಾಣಿಸುವ ಮಾರ್ಗಗಳು ಇವು. 500 ಪ್ರಯಾಣಿಕರಿಗೆ ಆನ್‌ಬೋರ್ಡ್ ತಂತ್ರಜ್ಞಾನ ಬಳಸುವ ಬಗ್ಗೆ ತರಬೇತಿ ನೀಡಲಾಗಿತ್ತು. ಅದರಲ್ಲಿ 25 ಪ್ರಯಾಣಿಕರು ಉಪಕರಣವನ್ನು ಬಳಸಿದ್ದರು' ಎಂದು ವಿವರಿಸಿದರು. ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್. ಮಾತನಾಡಿ, 'ಬಿಎಂಟಿಸಿ ಬಸ್‌ಗಳಲ್ಲಿ ಎಲ್ಲರೂ ಸಂಚರಿಸುವಂತಾಗಬೇಕು. ಯಾವುದೇ ದೈಹಿಕ ನ್ಯೂನತೆಗಳು ಸಂಚಾರಕ್ಕೆ ತೊಡ ಕಾಗಬಾರದು ಎಂಬುದು ಉದ್ದೇಶ. ಜೊತೆಗೆ ಇತರ ಪ್ರಮುಖ ಜಾಗತಿಕ ನಗರಗಳಿಗೆ ಸಮನಾಗಿ ಬೆಂಗಳೂರು ಇರಬೇಕು. ಈ ನಿಟ್ಟಿನಲ್ಲಿ ಆನ್‌ಬೋರ್ಡ್ ತಂತ್ರಜ್ಞಾನ ನಿರ್ಣಾಯಕ ಹೆಜ್ಜೆ' ಎಂದರು.

ಆನ್‌ಬೋರ್ಡ್ ಸಾಧನವು ದೃಷ್ಟಿ ಸಮಸ್ಯೆಯ ವ್ಯಕ್ತಿಗಳಿಗೆ ಬಸ್ ಮಾರ್ಗ ಸಂಖ್ಯೆಗಳನ್ನು ಗುರುತಿಸಲು ಸಹಾಯ ಮಾಡುತ್ತದೆ. ಅವರು ಆ ಸಾಧನದಲ್ಲಿ ಸಂಖ್ಯೆ ಒತ್ತಿದಾಗ ಬಸ್‌ನಲ್ಲಿ ಅಳವಡಿಸಿದ್ದ ಮೌಂಟೆಡ್ ಸ್ಪೀಕರ್ ಧ್ವನಿ ಹೊರಡಿಸುತ್ತದೆ. ಇದು ಬಸ್‌ನ ಚಾಲಕ ಮತ್ತು ನಿರ್ವಾಹಕರಿಗೂ ಮಾಹಿತಿ ನೀಡುವುದರಿಂದ ಅವರು ದೃಷ್ಟಿದೋಷ ಇರುವವರನ್ನು ಬಸ್ ಹತ್ತಿಸಲು ಸಹಾಯ ಮಾಡುತ್ತಾರೆ.

–ಇಳಿಯಬೇಕಾದ ಸ್ಥಳದಲ್ಲಿಯೂ ಬಟನ್ ಒತ್ತಿದರೆ ಅವರನ್ನು ಸುರಕ್ಷಿತವಾಗಿ ಇಳಿಸಲು ಸಾಧ್ಯವಾಗುತ್ತದೆ.

## ಸಾಂಪ್ರದಾಯಿಕ ವೇಷಭೂಷಣ ಧರಿಸಿ, ಕಲಾ ಪ್ರದರ್ಶನ ಮೂಲಕ ಪ್ರತಿಭಟನೆ

# ಶೇ.1 ಮೀಸಲಾತಿ ಇಲ್ಲವೇ ಭಿಕ್ಷೆಗೆ ಅವಕಾಶ ಕೊಡಿ



ಪ್ರತ್ಯೇಕ ಶೇ.1ರ ಒಳಮೀಸಲಾತಿಗೆ ಆಗ್ರಹಿಸಿ ಹೊಸಪೇಟೆಯಲ್ಲಿ ಅಲೆಮಾರಿ ಸಮುದಾಯದವರಿಂದ ಪ್ರತಿಭಟನೆ ನಡೆದು ಜಿಲ್ಲಾ ಆಡಳಿತಕ್ಕೆ ಮನವಿ ಸಲ್ಲಿಸಲಾಯಿತು.

**ಹೊಸಪೇಟೆ (ವಿಜಯನಗರ):** ಅಲೆಮಾರಿಗಳಿಗೆ ಶೇ 1ರ ಪ್ರತ್ಯೇಕ ಒಳಮೀಸಲಾತಿ ಕೊಡಿ ಇಲ್ಲವೇ ಭಿಕ್ಷೆ, ಬೇಟೆಯಾಡಲು ಅವಕಾಶ ನೀಡಿ ಎಂದು ಆಗ್ರಹಿಸಿ ನಗರದಲ್ಲಿ ನೂರಾರು ಮಂದಿ ತಮ್ಮ ಸಾಂಪ್ರದಾಯಿಕ ವೇಷಭೂಷಣಗಳು, ಕಲಾ ಪ್ರದರ್ಶನ ಮೂಲಕ ಪ್ರತಿಭಟನೆ ನಡೆಸಿದರು.

ಜಿಲ್ಲಾ ಅಲೆಮಾರಿ ಒಕ್ಕೂಟದ ಅಧ್ಯಕ್ಷ ಸಣ್ಣ ಮಾರೆಪ್ಪ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಮೆರವಣಿಗೆ ಗಾಂಧಿ ವೃತ್ತದಿಂದ ತಹಶೀಲ್ದಾರ್ ಕಚೇರಿಯವರೆಗೆ ನಡೆಯಿತು. ಸಾಂಪ್ರದಾಯಿಕ ವೇಷ ತೊಟ್ಟ ಕಲಾವಿದರು ಮೆರವಣಿಗೆ ಉದ್ದಕ್ಕೂ ತಮ್ಮ ಕಲೆ ಪ್ರದರ್ಶಿಸಿದರು. ತಹಶೀಲ್ದಾರ್ ಕಚೇರಿಯ ಸಮೀಪಕ್ಕೆ ಬಂದಾಗ ಮಳೆ ಬಿರುಸಿನಿಂದ ಸುರಿಯಿತು. ಹೀಗಾಗಿ ಅಲ್ಲಿ ಇನ್ನಷ್ಟು ಹೊತ್ತು ಕಲಾ ಪ್ರದರ್ಶನ ನೀಡಿ ಪ್ರತಿಭಟಿಸುವ ಯೋಜನೆ ಕೈಬಿಟ್ಟು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿ ಪ್ರತಿಭಟನೆ ಕೊನೆಗೊಳಿಸಲಾಯಿತು.

ಬೀದಿಯಲ್ಲಿ ಸಂಪ್ರದಾಯ: ಅಲೆಮಾರಿಗಳ ಜೀವನ ಪದ್ಧತಿ, ಅವರ ಕಲೆ, ಅವರು ನಡೆಸುವ ಅತಂತ್ರ ಬದುಕಿನ ಚಿತ್ರಣವನ್ನು ಬೀದಿಗಳಲ್ಲಿ ಪ್ರದರ್ಶಿಸುವ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವ ಪ್ರಯತ್ನ ನಡೆಯಿತು. ಸುಡುಗಾಡು ಸಿದ್ಧರ ಕಲೆ, ಹಗಲು ವೇಷಗಾರರ ಕಲೆ, ಸಿಂಧೊಳ್ಳ ಸಮಾಜದವರ ಕಲೆ, ಹಕ್ಕಿಪಿಕ್ಕಿಗಳು, ಬುಡುಬುಡಿಕೆಯವರ ಜೀವನ ಸಹಿತ ಹಲವಾರು ಅಲೆಮಾರಿ ಸಮುದಾಯಗಳ ಜೀವನ ವೃತ್ತಾಂತ ಪ್ರತಿಭಟನೆಯ ಮೂಲಕವೇ ಪರಿಚಯವಾಯಿತು.

**ಒತ್ತಾಯ:** ಒಳಮೀಸಲಾತಿಯನ್ನು ಜಾರಿ ಮಾಡುವ ಒತ್ತಡದಲ್ಲಿ ಸರ್ಕಾರ ಅಲೆಮಾರಿಗಳಂತಹ ಧ್ವನಿ ಇಲ್ಲದವರ ಧ್ವನಿ ಅಡಗಿಸಿದ್ದು ಅಕ್ಷಮ್ಯ. ಅಲೆಮಾರಿ ಸಮುದಾಯಗಳಿಗೆ ಮರಣ ಶಾಸನವನ್ನು ಸರ್ಕಾರ ಬರೆದುಬಿಟ್ಟಿದೆ, ಪ್ರತ್ಯೇಕ ಶೇ 1ರಷ್ಟು ಮೀಸಲಾತಿ ನೀಡುವ ಮೂಲಕ ನ್ಯಾಯ ನೀಡಬೇಕು ಎಂದು ಒಕ್ಕೂರಲ ಒತ್ತಾಯ ಮಾಡಲಾಯಿತು.

ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ಆಯೋಗದ ವರದಿಯಲ್ಲಿ ಸರ್ಕಾರದ ಸಮೀಕ್ಷೆಯ ದತ್ತಾಂಶಗಳ ಹಿನ್ನೆಲೆಯಲ್ಲಿ 59 ಸೂಕ್ಷ್ಮ ಮತ್ತು ಅಲೆಮಾರಿ ಪರಿಶಿಷ್ಟ ಜಾತಿಗಳ ಸಮೂಹಕ್ಕೆ ಪ್ರವರ್ಗ–ಎಯಲ್ಲಿ ವರ್ಗೀಕರಿಸಿರುವುದು ನ್ಯಾಯಸಮ್ಮತವಾಗಿತ್ತು. ಹೀಗಾಗಿ 59 ಸೂಕ್ಷ್ಮ ಮತ್ತು ಅಲೆಮಾರಿ ಪರಿಶಿಷ್ಟ ಜಾತಿಗಳನ್ನು ಪ್ರವರ್ಗ–ಎ ರಲ್ಲಿಯೇ ಇರಿಸಿ ಶೇ 1ರಷ್ಟು ಒಳ ಮೀಸಲಾತಿ ನಿಗದಿಗೊಳಿಸಬೇಕು ಎಂದು ಆಗ್ರಹಿಸಲಾಯಿತು.

ಮುಖಂಡರಾದ ಕಿನ್ನೂರಿ ಶೇಖಪ್ಪ, ಜೆ.ರಮೇಶ, ಶೇಖರ ಚನ್ನದಾಸರ, ಚೌಡಪ್ಪ, ಮಲ್ಲೇಶಪ್ಪ, ಮಂಜಣ್ಣ, ರಾಜಪ್ಪ, ಸಣ್ಣ ಅಜ್ಜಯ್ಯ, ಶಿವಕುಮಾರ್ ಇದ್ದರು.

**ಶಾಶ್ವತವಾಗಿ ವಂಚನೆ:** ಅಲೆಮಾರಿಗಳನ್ನು ಬಂಜಾರ, ಭೋವಿ, ಕೊರವ, ಕೊರಚ ಸಮಯದಾಯಗಳ ಜೊತೆಗೆ ಸೇರಿಸಿ ಶೇ 5ರಷ್ಟು ಮೀಸಲಾತಿಯನ್ನು ನಿಗದಿ ಮಾಡಿರುವುದರಿಂದ ಅಲೆಮಾರಿ ಸಮುದಾಯಗಳು ಶಾಶ್ವತವಾಗಿ ಮೀಸಲಾತಿಯಿಂದ ವಂಚಿತವಾಗಲಿವೆ. ಸಾವಿರಾರು ವರ್ಷಗಳಿಂದ ಅಸ್ಪೃಶ್ಯರಲ್ಲಿ ಅಸ್ಪೃಶ್ಯರಾಗಿಯೇ ಬದುಕಿ ಬಂದ ಈ ಅನಾಥ ಸಮುದಾಯಗಳಿಗೆ ಸ್ವಾತಂತ್ರ್ಯನಂತರ ಸಂವಿಧಾನಬದ್ಧ ಸೌಲಭ್ಯಗಳು ಇನ್ನೂ ದೊರಕಿಲ್ಲ ಎಂದು ಪ್ರತಿಭಟನಕಾರರು ದೂರಿದರು.

# ನಂದಿ: ಬಯಲುಸೀಮೆ ಅಭಿವೃದ್ಧಿಗೆ ನಾಂದಿ

## ಅಂತಿಮ ಹಂತದ ಸಿದ್ಧತೆ ಪರಿಶೀಲಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್



ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿಗಿರಿಧಾಮದ ಸಚಿವ ಸಂಪುಟ ಸಭೆ ನಡೆಯುವ ಹಿನ್ನೆಲೆಯಲ್ಲಿಗಿರಿಧಾಮದಲ್ಲಿ ಸಿದ್ದತೆಗಳನ್ನು ಸಚಿವ ಡಾ.ಎಂ.ಸಿ.ಸುಧಾಕರ್ ಪರಿಶೀಲಿಸಿದರು

**ಚಿಕ್ಕಬಳ್ಳಾಪುರ:** ನಂದಿಗಿರಿಧಾಮದಲ್ಲಿ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಚಿಕ್ಕಬಳ್ಳಾಪುರ, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಅಭಿವೃದ್ಧಿಯ ಕುರಿತು ವಿಶೇಷ ಬೆಳಕು ಚೆಲ್ಲುವ ನಿರೀಕ್ಷೆ ಇದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದರು.

ನಂದಿಗಿರಿಧಾಮದ ಮಯೂರ ಸಭಾಂಗಣದಲ್ಲಿ ಸಚಿವ ಸಂಪುಟ ಸಭೆ ನಡೆಯುವ ಹಿನ್ನೆಲೆಯಲ್ಲಿ ಗಿರಿಧಾಮಕ್ಕೆ ಭೇಟಿ ನೀಡಿ ಸಿದ್ಧತೆ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಕಲಬುರಗಿ, ಚಾಮರಾಜನಗರ ಜಿಲ್ಲೆಗಳಲ್ಲಿ ಸಚಿವ ಸಂಪುಟ ಸಭೆ ನಡೆದ ನಂತರ ಚಿಕ್ಕಬಳ್ಳಾಪುರ ಜಿಲ್ಲೆಯ ಐತಿಹಾಸಿಕ ನಂದಿಗಿರಿಧಾಮ ದಲ್ಲಿಯೂ ಸಭೆ ನಡೆಸಬೇಕು ಎಂದು ಮುಖ್ಯಮಂತ್ರಿ ಅವರಿಗೆ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಉಸ್ತುವಾರಿ ಸಚಿವರು ಮನವಿ ಮಾಡಿದ್ದೆವು ಎಂದರು.

ಮನವಿಗೆ ಸ್ಪಂದಿಸಿದ್ದ ಮುಖ್ಯಮಂತ್ರಿ ಜೂನ್ 19 ರಂದು ದಿನಾಂಕ ನೀಡಿದ್ದರು. ಸಭೆಯೂ ನಿಗದಿಯಾಗಿತ್ತು. ಆದರೆ ಈ ಭಾಗದ ಜಿಲ್ಲೆಗಳ ಜನರ ನಿರೀಕ್ಷೆಗೆ ಪೂರಕವಾಗಿ ಯೋಜನೆಗಳು ಸಿದ್ಧತೆ ಆಗಿಲ್ಲದ ಹಾಗೂ ಹಣಕಾಸು ಇಲಾಖೆಯ ಕಾರ್ಯ ಒತ್ತಡದಿಂದ ಪೂರಕ ತಯಾರಿಗಳು ಆಗದ ಕಾರಣ ಆ ಸಭೆ ವಿಧಾನಸೌಧಕ್ಕೆ ಸ್ಥಳಾಂತರವಾಯಿತು ಎಂದರು.

ಸಚಿವ ಸಂಪುಟ ಸಭೆಗೆ ಜಿಲ್ಲಾಡಳಿತ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದೆ. ಮೂರೂ ಜಿಲ್ಲೆಗಳ ಹಲವು ನಿರೀಕ್ಷೆಗಳು ಗರಿಗೆದರಿವೆ. ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಳ್ಳುವ ಮಹತ್ವದ ತೀರ್ಮಾನಗಳು ಈ ಭಾಗದ ಜನರಲ್ಲಿ ಹಲವು ಭರವಸೆಗಳನ್ನು ಹುಟ್ಟುಹಾಕಿವೆ. ಮುಖ್ಯಮಂತ್ರಿ ಅವರು ಪ್ರಕಟಿಸುವ ನಿರ್ಧಾರಗಳು ಮೂರು ಜಿಲ್ಲೆಗಳ ಅಭಿವೃದ್ಧಿ ದೃಷ್ಟಿಯಿಂದ ಮಹತ್ವದ್ದಾಗಿದ್ದು, ವಿಶೇಷವಾಗಿ ಬೆಳಕು ಚೆಲ್ಲಲಿದೆ ಎಂದು ಹೇಳಿದರು. ಸಚಿವ ಸಂಪುಟ ಸಭೆ ಹಿನ್ನೆಲೆಯಲ್ಲಿ ನಂದಿ ಗ್ರಾಮದ ಭೋಗ ನಂದೀಶ್ವರ ದೇವಾಲಯ ಮತ್ತು ನಂದಿಗಿರಿಧಾಮಕ್ಕೆ ಖಾಸಗಿ ವ್ಯಕ್ತಿಗಳು ಹಾಗೂ ವಾಹನಗಳ ಪ್ರವೇಶ ನಿರ್ಬಂಧಿಸಲಾಗಿದೆ. ಅಧಿಕೃತ ಅನುಮತಿ ಪತ್ರ ಹೊಂದಿರುವ ವ್ಯಕ್ತಿಗಳು ಮತ್ತು ವಾಹನಗಳಿಗೆ ಮಾತ್ರ ಪ್ರವೇಶ ಇರುತ್ತದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಡಾ.ವೈ.ನವೀನ್ ಭಟ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ, ಜಿಲ್ಲಾ ಅರಣ್ಯ ಉಪ ಸಂರಕ್ಷಣಾಧಿಕಾರಿ ಗಿರೀಶ್, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಎನ್.ಭಾಸ್ಕರ್ ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಈ ವೇಳೆ ಹಾಜರಿದ್ದರು.

**ಗಿರಿಧಾಮಕ್ಕೆ ಬಸ್‌ನಲ್ಲಿ ಸಿ.ಎಂ, ಸಚಿವರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಂಗಳೂರಿನ ನಿವಾಸದಿಂದ ರಸ್ತೆ ಮಾರ್ಗದ ಮೂಲಕ ನಂದಿ ಗ್ರಾಮಕ್ಕೆ ಬರುವರು. ನಂದಿ ಗ್ರಾಮದ ಭೋಗ ನಂದೀಶ್ವರ ದೇವಾಲಯದಲ್ಲಿ ಸಚಿವ ಸಂಪುಟದ ಸಹೋದ್ಯೋಗಿಗಳೊಂದಿಗೆ ಭೇಟಿ ನೀಡಿ, ಅಲ್ಲಿ ಪೂಜೆ ಸಲ್ಲಿಸುವರು. ನಂತರ ಕೆಎಸ್‌ಆರ್‌ಟಿಸಿ ಬಸ್ ಮೂಲಕ ನಂದಿಗಿರಿಧಾಮಕ್ಕೆ ತೆರಳುವರು. ಮಧ್ಯಾಹ್ನ 12ಕ್ಕೆ ಸಚಿವ ಸಂಪುಟ ಸಭೆ ಆರಂಭವಾಗಲಿದೆ ಎಂದು ಸಚಿವರು ತಿಳಿಸಿದರು.

# ಅಕ್ರಮ ಮನೆ, ಶೆಡ್‌ಗಳ ತೆರವುಗೊಳಿಸಿದ ಅಧಿಕಾರಿಗಳು



**ಬೆಂಗಳೂರು:** ನಗರದಲ್ಲಿ ಅನಧಿಕೃತ ಕಟ್ಟಡ ನಿರ್ಮಾಣಗಳನ್ನು ತೆರವು ಗೊಳಿಸುತ್ತಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ), ನಡೆದ ಕಾರ್ಯಾಚರಣೆಯಲ್ಲಿ ನಾಗರಬಾವಿ ಬಡಾವಣೆಯ ಮಾಳಗಾಳದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಮನೆ, ಶೆಡ್‌ಗಳನ್ನು ತೆರವು ಮಾಡಿ 120 ಕೋಟಿ ಆಸ್ತಿಯನ್ನು ವಶಕ್ಕೆ ಪಡೆದುಕೊಂಡಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಮಾಳಗಾಳ ಗ್ರಾಮದ (ನಾಗರಬಾವಿ ಬಡಾವಣೆ) ಸರ್ವೆ ನಂ. 14/2ರ 2 ಎಕರೆ 16 ಗುಂಟೆ ಪ್ರದೇಶದಲ್ಲಿ 25 ಸಿಮೆಂಟ್ ಶೀಟ್‌ನ ಮನೆಗಳು, ಎರಡು ಆರ್‌ಸಿಸಿ ಮನೆ ಹಾಗೂ ಕಟ್ಟಡಗಳನ್ನು ತೆರವುಗೊಳಿಸಿತು. ಒತ್ತುವರಿ ತೆರವು ಮಾಡುವಂತೆ ಬಿಡಿಎ ಅಧಿಕಾರಿಗಳು 3–4 ಬಾರಿ ಮಾಹಿತಿ ನೀಡಿದ್ದರೂ ತೆರವು ಮಾಡಿರಲಿಲ್ಲ. ಬೆಳಿಗ್ಗೆ ನಾಲ್ಕು ಜೆಸಿಬಿ, ಒಂದು ಹಿಟಾಚಿ ಯಂತ್ರ ಕಾರ್ಯಾಚರಣೆ ನಡೆಸಿ, ಅಕ್ರಮ ಕಟ್ಟಡಗಳನ್ನು ನೆಲಸಮ ಮಾಡಿದವು.

ಬೀದಿಗೆ ಬಿದ್ದ ಕುಟುಂಬ: ಉತ್ತರ ಕರ್ನಾಟದ 20 ಕುಟುಂಬಗಳು ಸಿಮೆಂಟ್ ಶೀಟ್ ಮನೆಗಳಲ್ಲಿ ವಾಸ ವಿದ್ದರು. ನಿರ್ಮಾಣ ಹಂತದ ಕಟ್ಟಡ ಗಳಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಅವರು, ದಿಢೀರ್ ಕಾರ್ಯಾಚರಣೆಯಿಂದಾಗಿ ಕಂಗಾಲಾದರು. ಮನೆಗಳು ನೆಲಸಮ ವಾಗುವುದನ್ನು ಕಂಡು ಕಣ್ಣೀರಿಟ್ಟರು. ಮೊದಲೇ ಮಾಹಿತಿ ನೀಡಿದ್ದರೆ ಮನೆಗಳನ್ನು ಖಾಲಿ ಮಾಡುತ್ತಿದ್ದೆವು. ಮನೆಯ ಸಾಮಗ್ರಿಗಳನ್ನು ಹೊರಗೆ ಹಾಕಿರುವುದರಿಂದ ಏನು ಮಾಡಬೇಕು ಎಂದು ಗೊತ್ತಾಗುತ್ತಿಲ್ಲ. ತಿಂಗಳಿಗೆ ? 4 ಸಾವಿರ ಬಾಡಿಗೆ ನೀಡುತ್ತಿದ್ದೆವು. ಈಗ ಮಾಲೀಕ ನಾಪತ್ತೆಯಾಗಿದ್ದಾರೆ' ಎಂದು ನಿವಾಸಿಗಳು ಕಣ್ಣೀರಿಟ್ಟರು.

'ಮಕ್ಕಳು ಸಮೀಪದ ಶಾಲೆಗೆ ಹೋಗುತ್ತಿದ್ದರು. ಈಗ ಸಾಮಗ್ರಿಗಳನ್ನು ರಸ್ತೆ ಪಕ್ಕದಲ್ಲಿಯೇ ಇಟ್ಟುಕೊಂಡಿ ದ್ದೇವೆ. ಮಲಗಲು ಸಹ ಜಾಗವಿಲ್ಲ. ವಯಸ್ಸಾದವರು, ಅಂಗವಿಕಲರು, ಅನಾರೋಗ್ಯ ಪೀಡಿತರು ಇದ್ದಾರೆ' ಎಂದು ಅಳಲು ತೋಡಿಕೊಂಡರು.

# ಮಾರುಕಟ್ಟೆಯಾದ ಪಾದಚಾರಿ ಮಾರ್ಗ



**ತಿಪಟೂರು:** ನಗರಸಭಾ ವೃತ್ತದಿಂದ ಹಾಸನ ವೃತ್ತದವರೆಗೂ ಬಿ.ಹೆಚ್.ರಸ್ತೆಯ ಪಕ್ಕದಲ್ಲಿರುವ ಪಾದಚಾರಿ ಮಾರ್ಗದಲ್ಲಿ ವ್ಯಾಪಾರ ಹಾಗೂ ವಾಹನಗಳ ಪಾರ್ಕಿಂಗ್‌ನಿಂದ ಪ್ರತಿನಿತ್ಯ ಅಪಘಾತಗಳು ಸಂಭವಿಸುತ್ತಿವೆ ಎಂದು ಸಾರ್ವಜನಿಕರು ದೂರಿದ್ದಾರೆ.

ನಗರಸಭೆ ಮತ್ತು ಪೊಲೀಸ್ ಇಲಾಖೆ ಹೊಂದಾಣಿಕೆಯಿಲ್ಲದೆ ಹಾಗೂ ಬೇಜಾವ್ದಾರಿಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದಿದ್ದಾರೆ. ಎಲ್ಲೆಂದರಲ್ಲಿ ವ್ಯಾಪಾರಸ್ಥರು ಅವರೆಕಾಯಿ, ತೊಗರಿಕಾಯಿ, ಬಟ್ಟೆ, ತರಕಾರಿ, ಹಣ್ಣು, ಹೂ, ಕಡಲೆಕಾಯಿ, ಈರುಳ್ಳಿ ಮತ್ತಿತರೆ ವಸ್ತುಗಳನ್ನು ಮಾರಾಟ ಮಾಡುತ್ತಿದ್ದು, ಎಲ್ಲಿಯೂ ಸೂಚನಾ ಫಲಕಗಳನ್ನು ಅಳವಡಿಸಿಲ್ಲ. ನಗರಸಭೆಯ ಯಾವುದೇ ವೃತ್ತಗಳಲ್ಲೂ ಪೊಲೀಸ್ ಸಿಬ್ಬಂದಿ ನಿಯೋಜಿಸದ ಕಾರಣ ತೊಂದರೆಯಾಗುತ್ತಿದೆ ಎಂದು ದೂರಿದ್ದಾರೆ. ತರಕಾರಿ, ಹಣ್ಣು ಹಾಗೂ ಇತರೆ ವ್ಯಾಪಾರಸ್ಥರು ನಗರದ ಬಿ.ಹೆಚ್. ರಸ್ತೆ, ನಗರಸಭಾ ವೃತ್ತದ ಬಳಿ, ರೈಲ್ವೆ ಸ್ಟೇಷನ್ ರಸ್ತೆ, ತ್ರಿಮೂರ್ತಿ ಚಿತ್ರಮಂದಿರದ ಪಕ್ಕ, ಎಸ್‌ಬಿಐ ಬ್ಯಾಂಕ್, ಬಾಲಕಿಯರ ಪದವಿ ಪೂರ್ವ ಕಾಲೇಜು, ಸಾಯಿಬಾಬಾ ರಸ್ತೆ, ಎಆರ್‌ಟಿಒ ಮುಂಭಾಗ, ಬಸ್ ನಿಲ್ದಾಣ ಸುತ್ತಮುತ್ತ, ಅರಳಿಕಟ್ಟೆ, ದೊಡ್ಡಪೇಟೆ, ಕೋಡಿ ವೃತ್ತ ರಸ್ತೆ ಸೇರಿದಂತೆ ನಗರದ ಪ್ರಮುಖ ರಸ್ತೆಗಳು, ಸರ್ಕಲ್‌ಗಳ ಸಾರ್ವಜನಿಕ ಸ್ಥಳಗಳಲ್ಲಿ ವ್ಯಾಪಾರ ಮಾಡುತ್ತಿದ್ದು ಇದರಿಂದ ಜನದಟ್ಟಣೆ ಹೆಚ್ಚಾಗಿದ್ದು, ಪಾದಚಾರಿಗಳ ಓಡಾಟಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಆರೋಪಿಸಿದ್ದಾರೆ. ತರಕಾರಿ, ಹಣ್ಣು, ಹೂವುಗಳ ಮಾರಾಟಕ್ಕೆ ಎಪಿಎಂಸಿಯಿಂದ ಉತ್ತಮ ಮಾರುಕಟ್ಟೆ ನಿರ್ಮಿಸಿದ್ದರೂ, ಇಲ್ಲಿನ ನಗರಸಭೆ ಹಾಗೂ ಪೊಲೀಸ್ ಇಲಾಖೆಗಳು ಸಾರ್ವಜನಿಕರ, ವಿದ್ಯಾರ್ಥಿಗಳ, ವಯೋವೃದ್ಧರ ಸುಗಮ ಸಂಚಾರಕ್ಕೆ ಒತ್ತು ನೀಡದೆ, ವ್ಯಾಪಾರಿಗಳಿಗೆ ಸರಿಯಾದ ಮಾರ್ಗದರ್ಶನ ನೀಡದೆ ಬೇಜವಾಬ್ದಾರಿಯಿಂದ ವರ್ತನೆ ಮಾಡುತ್ತಿದ್ದು ನಿತ್ಯವೂ ಅಪಘಾತಗಳಿಗೆ, ಗಲಾಟೆಗಳಿಗೆ ಕಾರಣವಾಗುತ್ತಿದೆ.

**Printed by :** S.T. NAVEEN KUMAR,No - 49B, LIG, 4th Cross, Near Sadiq Nagara Water Tank, K.H.B Colony, Chitradurga -577501, Chitradurga Dist. Karnataka. **Published by :** Y.K. PRAVEEN KUMAR,Sree Raghavendra Nilaya, Near Old Sharada School, Ward No-4, Vedavathi Nagara, Hiriyur – 577598, Chitradurga Dist, Karnataka. **Owned by :** Y.K. PRAVEEN KUMAR,Sree Raghavendra Nilaya, Near Old Sharada School, Ward No-4, Vedavathi Nagara, Hiriyur – 577598,Chitradurga Dist, Karnataka. **Printed at : NITHYA PRINTERS**,No - 49B, LIG, 4th Cross, Near Sadiq Nagara Water Tank, K.H.B Colony, Chitradurga - 577501,Chitradurga Dist. Karnataka. **Published at :** At Sree Raghavendra Nilaya,Near Old Sharada School, Ward No-4, Vedavathi Nagara, Hiriyur – 577598,Chitradurga Dist, Karnataka. **Editor :** Y.K. PRAVEEN KUMAR,Sree Raghavendra Nilaya, Near Old Sharada School, Ward No-4, Vedavathi Nagara, Hiriyur – 577598,Chitradurga Dist, Karnataka.